ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಜನವರಿ, ೨೦೦೨ ಸಂಚಿಕೆ ೬

ನಮ್ಮ ದೇಶ ಎದುರಿಸುತ್ತಿರುವ ಗಂಡಾಂತರಗಳು ಮತ್ತು ನಮ್ಮ ಆಡಳಿತ ವೈಖರಿ:-

★

ಮೃತ್ಯುವಿನೊಂದಿಗೆ ಎರಡನೇ ಮುಖಾಮುಖಿಯ ಸಂದರ್ಭದಲ್ಲಿ

★

ರಾಷ್ಟ್ರಕ್ಕೊಂದು ನಿವೇದನೆ

★

ದೂರದರ್ಶನವು ಪುಸ್ತಕದ ವಿರೋಧಿಯಲ್ಲ ಸ್ವತಃ ಜನರೇ ಪುಸ್ತಕದ ಬಗ್ಗೆ ನಿರಾಸಕ್ತರು

★

ಕಾನೂನು ಸಾಕ್ಷರತಾ ಕಾರ್ಯಕ್ರಮ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ನೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ : ೬

ಜನವರಿ ೨೦೦೨

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-

ಅರ್ಧವಾರ್ಷಿಕ : ರೂ. ೫೦/-

ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)

ಕಲ್ಯಾಣಿ ಬೀದಿ,

ಮೇಲುಕೋಟೆ

ಜಿಲ್ಲಾ : ಮಂಡ್ಯ. ೫೭೧ ೪೩೧.

ದೂರವಾಣಿ:೦೮೨೩೬ ೪೮೭೫೪

ತಿಮಿಂಗಿಲದ ಬಸಿರಲ್ಲಿ, ಆರ್ವೆಲ್ ಜೊತೆ

ಗೆಳೆಯ
ನಾನಿನ್ನು ಬರೆಯಲಾರೆ
ಈ ವೈಭವದ ಭ್ರಷ್ಟಾಚಾರದ ಬಗ್ಗೆ
ನೈತಿಕತೆಯ ಮೇಲಿನ ಅತ್ಯಾಚಾರದ ಬಗ್ಗೆ
ನಿನಗೆ ಹೇಗೆ ಕೇಳಿಸೀತು
ನನ್ನ ಬಿಕ್ಕಳಿಕೆ ?
ಅದು ಹೇಗೆ ತಿಳಿದೀತು ನಿನಗೆ
ಬಿರುಕು ದೋಣಿಯೊಳಗಿನ
ನನ್ನ ಈ ಪಯಣ ?
ಮೆಲ್ಲನೆ ಮುಳುಗುವ ದೋಣಿಯೊಳಕ್ಕೆ
ಅಬ್ಬರದ, ಆರ್ಭಟದ
ನಗುವ ಅಲೆಗಳ
ಅಪ್ಪಳಿಸುವಿಕೆಯ
ಇನ್ನು ಸಹಿಸಲಾರೆನು ನಾನು.
ಅದಕ್ಕೆ ನಾನೀಗ ತೀರ್ಮಾನಿಸಿದ್ದೇನೆ,
ಹಿಂದಿನ ರಾಜಕನ್ನಿಕೆಯರಂತೆ
ಮಲ್ಲಿಗೆ ಮುಡಿದು, ಜರತಾರಿ ಉಟ್ಟು
ಆಭರಣ ತೊಟ್ಟು
ದೋಣಿಯಿಂದ ಜಿಗಿದು
ಸಮುದ್ರದ ತಳ ಸೇರುವುದು.

–ಮಿೂನಾ ಮೈಸೂರು

ಚಂದಾದಾರರಲ್ಲಿ :-

ಚಂದಾ ಕಳುಹಿಸಿರುವ ಓದುಗರಿಗೆ ಕೃತಜ್ಞತೆಗಳು. – ಪ್ರಕಾಶಕರು

ವಿಚಾರ ದೀಪ್ತಿ....................

ರಾಷ್ಟ್ರೀಯತೆ : ಒಂದು ಮರು ಚಿಂತನೆ

ರಾಷ್ಟ್ರೀಯತೆಯೆನ್ನುವುದೊಂದು ಮನಸ್ಥಿತಿ, ಸಮೂಹ ಕಲ್ಯಾಣಕ್ಕೆ ಅಗತ್ಯವೆನಿಸುವ ಒಂದು ಧರ್ಮದ ಕುರಿತಾದ ಅರಿವು. ಅದು ವರ್ಣವನ್ನಾಗಲಿ ವಂಶವನ್ನಾಗಲಿ ಅವಲಂಬಿಸಿರದೆ ಸಮಾನ ಚಿಂತನೆ ಹಾಗೂ ಉದ್ದೇಶಗಳನ್ನು ಅವಲಂಬಿಸಿರುತ್ತದೆ ಎನ್ನುತ್ತಾನೆ. ಇಟಲಿಯ ಕ್ರಾಂತಿಕಾರಿ ಜೋಸೆಫ್ ಮಜನಿ. ರಾಷ್ಟ್ರೀಯತೆಯ ಕಲ್ಪನೆಯೂ ಕಾಲದಿಂದ ಕಾಲಕ್ಕೆ ಬದಲಾಗುವುದರಲ್ಲಿ ಆಶ್ಚರ್ಯವೇನಿಲ್ಲ. ರಾಷ್ಟ್ರಗಳು ಹುಟ್ಟುತ್ತವೆ, ಬೆಳೆಯುತ್ತವೆ ಹಾಗೂ ನಾಶವಾಗುತ್ತವೆ. ಪುರಾತನ ಕಾಲದಲ್ಲಿ ಭಾರತವೆಂಬ ರಾಷ್ಟ್ರೀಯ ಕಲ್ಪನೆಯೊಂದು ಇತ್ತೆ? ಇದ್ದರೆ ಅದರ ವ್ಯಾಪ್ತಿ ಇಂದು ನಾವು ಭಾರತವೆಂದು ಕರೆಯುವ ಅಥವಾ ಮಾನಸಿಕವಾಗಿ ಅರಿಯುವ ರಾಷ್ಟ್ರಕ್ಕೆ ಸರಿಸಮವಾಗಿತ್ತೆ? ಪಾಕಿಸ್ತಾನ, ಬಾಂಗ್ಲಾದೇಶ, ಭೂತಾನ, ನೇಪಾಳ, ಶ್ರೀಲಂಕಾ (ಬಹುಶಃ ಬರ್ಮಾ ದೇಶ ಕೂಡ) ಇಂದಿನ ಭಾರತದಿಂದ ಬೇರೆಡೆಯಾಗಿರುವುದು ಎಷ್ಟರಮಟ್ಟಿಗೆ ಸಮಂಜಸ? ಸಿಕ್ಕಿಮನ್ನು ಭಾರತದ ಗಣರಾಜ್ಯದಲ್ಲಿ ಸೇರಿಸಿಕೊಂಡುದು ಸರಿಯೆ ತಪ್ಪೆ? ಶ್ರೀಲಂಕವು ಎರಡು ರಾಷ್ಟ್ರಗಳಾಗಿ ಒಡೆಯುವುದರಿಂದ ಮಾತ್ರವೇ ಅಲ್ಲಿ ಸಮೂಹ ಕಲ್ಯಾಣ ಸಾಧ್ಯವೇ? ಭಾಷಾವಾರು ಪ್ರಾಂತ ರಚನೆಯಿಂದಾಗಿ ಭಾರತದ ರಾಷ್ಟ್ರೀಯತೆಗೆ ಒಳಿತಾಗಿದೆಯೇ ಕೆಡುಕಾಗಿದೆಯೇ? ಭಾರತವು ಬ್ರಿಟಿಷರ ಆಡಳಿತಕ್ಕೆ ಒಳಗಾಗದೆ ಇರುತ್ತಿದ್ದರೆ ನಿಮಗೆ ರಾಷ್ಟ್ರೀಯ ಕಲ್ಪನೆ ಬರುವುದು ಸಾಧ್ಯವಿತ್ತೆ? ಖಲಿಸ್ತಾನದಿಂದ ಮಾತ್ರವೇ ಸಿಖ್ ಸಮಸ್ಯೆ ಬಗೆಹರಿಯುವುದೇ? ಮುಂದಿನ ಶತಮಾನದಲ್ಲಿ ಭಾರತದ ಭೂಪಟ ಇದೇ ರೀತಿ ಇರುತ್ತದೆಯೇ? ರಾಷ್ಟ್ರೀಯತೆಯ ಮಾತೆತ್ತಿದ ತಕ್ಷಣ ಇಂಥ ಹಲವಾರು ಪ್ರಶ್ನೆಗಳೇಳುತ್ತವೆ ಹಾಗೂ ಈ ಪ್ರಶ್ನೆಗಳಿಗೆ ಸುಲಭವಾದ ಉತ್ತರಗಳಿಲ್ಲವೆಂಬುದನ್ನು ಮನಗಾಣಬೇಕು.

–ಕೆ. ವಿ. ತಿರುಮಲೇಶ್

ನಮ್ಮ ದೇಶ ಎದುರಿಸುತ್ತಿರುವ ಗಂಡಾಂತರಗಳು ಮತ್ತು ನಮ್ಮ ಆಡಳಿತ ವೈಖರಿ!

– ಸುರೇಂದ್ರ ಕೌಲಗಿ

ಡಿಸೆಂಬರ್ ೧೩ ರ ರಂದು ಭಯೋತ್ಪಾದಕರು ಭಾರತದ ಸಂಸತ್ ಭವನದ ಮೇಲೆ ದಾಳಿ ಮಾಡಿರುವುದು ನಮ್ಮ ದೇಶದ ಸುರಕ್ಷತೆ ಅಪಾಯದ ಅಂಚಿನಲ್ಲಿದೆ ಎಂಬುದರ ಸಂಕೇತವಾಗಿದೆ. ಭಾರತದ ಸಂಸತ್ ಭವನ, ರಾಷ್ಟ್ರ ಪತಿ ಭವನ, ಪ್ರಧಾನ ಮಂತ್ರಿಯವರ ನಿವಾಸ ಇತ್ಯಾದಿಗಳು ಭದ್ರ ಸುರಕ್ಷಾ ವ್ಯವಸ್ಥೆಗೆ ಒಳಪಟ್ಟಿರುತ್ತವೆಂಬುದು ಸಾಮಾನ್ಯ ತಿಳುವಳಿಕೆ. ಆದರೆ ಡಿಸೆಂಬರ್ ೧೩ ರ ರಂದು ಭಯೋತ್ಪಾದಕರು ಬಹಳ ಸುಲಭವಾಗಿ ಸಂಸತ್ ಆವರಣದಲ್ಲಿ ಒಳಗೆ ನುಗ್ಗಿದ್ದು ಮತ್ತು ಅಲ್ಲಿದ್ದ ರಾಜಕೀಯ ನಾಯಕರ ಹತ್ಯದ ಸಾಧ್ಯತೆ ಇದ್ದುದು ನಮ್ಮ ಸುರಕ್ಷಾ ವ್ಯವಸ್ಥೆ ಎಷ್ಟು ಶಿಥಿಲವಾಗಿದೆ ಎಂಬುದನ್ನು ತೋರಿಸುತ್ತದೆ. ಹಿಂದೆ ಇದಕ್ಕೂ ಮೊದಲು ಕಾಶ್ಮೀರದ ಶಾಸನ ಸಭೆಯ ಮೇಲೆ ದಾಳಿ ನಡೆದುದು ಕೂಡ ಈ ಮಾತಿಗೆ ಇನ್ನೊಂದು ಉದಾಹರಣೆ ಯಾಗಿದೆ. ಅಲ್ಲದೆ. ತೆಹಲ್ಕಾ ಮಾಧ್ಯಮವು ಹೊರಗೆಡುಹಿದ ರಕ್ಷಣಾ ಇಲಾಖೆ ಯಲ್ಲಿಯ ಭ್ರಷ್ಟಾಚಾರದ ಸಂಗತಿಯಂತೂ ನಮ್ಮ ದೇಶದ ಸುರಕ್ಷಾ ವ್ಯವಸ್ಥೆಯ ದೌರ್ಬಲ್ಯಗಳ ಮೇಲೆ ಕ್ಷಕಿರಣವನ್ನು ಚೆಲ್ಲಿದೆ. ಹೀಗೆ ನಮ್ಮ ದೇಶವು ಸುರಕ್ಷತೆಯ ವಿಷಯದಲ್ಲಿ ಒಂದು ಗಂಡಾಂತರದ ಪರಿಸ್ಥಿತಿಯಲ್ಲಿದೆ. ಕಾಶ್ಮೀರ ದಲ್ಲಿ ಕಳೆದ ಐವತ್ತುಮೂರು ವರ್ಷಗಳಿಂದ ಪಾಕಿಸ್ತಾನದ ಜೊತೆ ಅಘೋಷಿತ ಯುದ್ಧ ನಡೆದಿದೆ. ಮತ್ತು ಈ ಯುದ್ಧವು ಇದುವರೆಗೂ ಸುಮಾರು ೧೩ ಸಾವಿರ ಜನರಿಗೂ ಹೆಚ್ಚು ಜನರನ್ನು ಆಹುತಿ ತೆಗೆದುಕೊಂಡಿದೆ. ಸಧ್ಯಕ್ಕೆ ಕಾಶ್ಮೀರ ಸಮಸ್ಯೆಯು ಬಗೆಹರಿಯುವ ಸೂಚನೆಗಳಿಲ್ಲ. ಇಷ್ಟೇ ಅಲ್ಲ, ಇನ್ನೊಂದು ಯುದ್ಧದ ನಂತರವೇ ಈ ಸಮಸ್ಯೆಯು ಪರಿಹಾರ ಗೊಳ್ಳುವ ಸಾಧ್ಯತೆಯಿದೆ. ಅಂಥ ಯುದ್ಧ ಸಂಭವಿಸಿದಲ್ಲಿ ಅದು ಭಯಂಕರ ವಿನಾಶಕಾರಿ ಯುದ್ಧವೇ ಆಗುತ್ತದೆ, ಏಕೆಂದರೆ ಭಾರತ ಮತ್ತು ಪಾಕಿಸ್ತಾನ ಈ ಎರಡೂ ದೇಶಗಳು ಈಗ ಅಣುಅಸ್ತ್ರಗಳನ್ನು ಹೊಂದಿವೆ. ೨೦೦ಕಿಲೋ ಮೀಟರ್‌ನಿಂದ ೨ ಸಾವಿರ ಕಿಲೋ ಮೀಟರ್ ವರೆಗೆ ಹಾರಿಹೋಗಬಹುದಾದ ಕ್ಷಿಪಣಿಗಳನ್ನು ಹೊಂದಿವೆ. ಇದು ಭಾರತದ ಉತ್ತರದ ಗಡಿಯಲ್ಲಿರುವ ಸಮಸ್ಯೆಯಾದರೆ ದೇಶದ ಒಳಗಿನ ಸಮಸ್ಯೆ ಗಳು ನೂರಾರು. ಅವುಗಳಲ್ಲಿ ಬಹಳ ಪ್ರಮುಖವಾದುದು ಸರ್ಕಾರದ ಆಡಳಿತದಲ್ಲಿಯ ಭ್ರಷ್ಟಾಚಾರ ಮತ್ತು ಅದಕ್ಷತೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರ ಶಾಹಿಯು ಬಹಳ ಪ್ರಬಲವಾಗಿದೆ. ಈ ಅಧಿಕಾರಿ ಶಾಹಿಯ ಕಪಿ ಮುಷ್ಟಿಯಲ್ಲಿ

ಪ್ರಜಾ ಪ್ರತಿನಿಧಿಗಳು ಮತ್ತು ಜನರು ಇಬ್ಬರೂ ಸಿಕ್ಕಿಕೊಂಡಿದ್ದಾರೆ. ಅಧಿಕಾರ ಶಾಹಿಯು ದೇಶದ ಯಾವುದೇ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುವ ಮನೋಭಾವ ಹೊಂದಿರುವುದಿಲ್ಲ. ಆದ್ದರಿಂದ ದೇಶದಲ್ಲಿ ಇಂದು ಸಾವಿರಾರು ಕಾನೂನುಗಳು ಇದ್ದರೂ ಸಹ ದೇಶದಲ್ಲಿ ಹಿಂಸಾಚಾರ, ಶೋಷಣೆ. ಭ್ರಷ್ಟಾಚಾರ ಇತ್ಯಾದಿಗಳು ಯಾವ ಅಡೆತಡೆ ಇಲ್ಲದೆ ಸಾಗುತ್ತಿವೆ. ಇದರ ಪರಿಣಾಮವಾಗಿ ದೇಶದ ಕೈಗಾರಿಕೆಗಳು ಸ್ಥಗಿತಗೊಳ್ಳುತ್ತಿವೆ. ಶಿಕ್ಷಣ ವ್ಯವಸ್ಥೆಯು ಅಧೋಗತಿಗಿಳಿದಿದೆ. ರೈತರು, ನೇಕಾರರು ಮತ್ತು ಇತರ ಕಸುಬುದಾರರು ಸಾಲದ ಸಂಕೋಲೆಗೆ ಸಿಕ್ಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಉತ್ಪಾದಿಸಲ್ಪಟ್ಟ ಅಥವಾ ಬೆಳೆಯುಲಾದ ಯಾವುದೇ ಪದಾರ್ಥಗಳಿಗೆ ಯೋಗ್ಯ ಬೆಲೆ ದೊರೆಯುತ್ತಿಲ್ಲ. ಈ ಕಾರಣದಿಂದಾಗಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಈಗ ನಮ್ಮ ರಾಜ್ಯವು ತೀವ್ರವಾದ ವಿದ್ಯುತ್ ಅಭಾವಕ್ಕೊಳಗಾಗಿದೆ. ಈ ಕಾರಣದಿಂದಾಗಿ ನಗರಗಳಲ್ಲಿಯು ಸಮಸ್ಯೆಗಳಂತೂ ಅಸಹನೀಯವಾಗಿವೆ ಹೀಗೆ ನಮ್ಮ ದೇಶವು ಎದುರಿಸುತ್ತಿರುವ ಗಂಡಾಂತರಗಳು ನೂರಾರು ಇರುವಾಗ ಆಡಳಿತ ವ್ಯವಸ್ಥೆಯು ಅಷ್ಟೇ ಕೆಟ್ಟಿರುವುದು ದುರ್ದೈವದ ಸಂಗತಿಯಾಗಿದೆ. ಇಂದು ಯಾವ ಸರ್ಕಾರಿ ಕಛೇರಿಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಶಾಲೆ ಕಾಲೇಜುಗಳಲ್ಲಿ ಸರಿಯಾಗಿ ಪಾಠ ನಡೆಯುತ್ತಿಲ್ಲ. ಆಸ್ಪತ್ರೆಗಳು ನರಕಸದೃಶವಾಗಿವೆ ರಾಜ್ಯದ ಎಲ್ಲ ರಸ್ತೆಗಳು ಕೆಟ್ಟು ಹೋಗಿವೆ. ಈ ಸಮಸ್ಯೆಗಳ ಪರಿಹಾರಕ್ಕೆ ತಕ್ಕುದಾಗಿ ಆಡಳಿತ ವ್ಯವಸ್ಥೆಯು ಇರಬೇಕಾಗುತ್ತದೆ. ನಮ್ಮ ದೇಶದ ಗಡಿಯಲ್ಲಿ ಸೈನಿಕರು ಬಹಳಷ್ಟು ಕಷ್ಟ ಪಡುತ್ತಿದ್ದಾರೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಗಡಿಯಲ್ಲಿ ಸೈನಿಕರು ಅಷ್ಟೊಂದು ಕಷ್ಟ ಪಡುತ್ತಿರುವಾಗ ದೇಶದ ಒಳಭಾಗದಲ್ಲಿ ಆಡಳಿತ ಸಡಿಲಾಗಿದೆ ಯಾವ ನೌಕರನಲ್ಲಿಯೂ ಸಹ ಸೈನಿಕರಲ್ಲಿರುವ ದೇಶಾಭಿಮಾನ ಕಾರ್ಯ ತತ್ಪರತೆ ಇತ್ಯಾದಿ ಗುಣಗಳು ಇಲ್ಲ. ದೇಶದ ನ್ಯಾಯಾಲಯಗಳಲ್ಲಿಸಾವಿರಾರು ವ್ಯಾಜ್ಯಗಳು ಹಲವಾರು ವರ್ಷಗಳಿಂದ ತೀರ್ಮಾನವಾಗದೇ ಉಳಿದಿವೆ, ಒಂದು ಕಡೆಗೆ ತುರ್ತು ಪರಿಸ್ಥಿತಿಯು ಅನುಭವ ಇನ್ನೊಂದು ಕಡೆಗೆ ಆರಾಮ ಮತ್ತು ವಿರಾಮ ಮತ್ತು ಹೊಣಗೇಡಿತನದ ಪರಿಸ್ಥಿತಿ. ಇಂಥ ವಿಪರ್ಯಾಸ ಉಳಿದುಕೊಂಡು ಬಂದರೆ ಈಗ ನಮ್ಮ ಸರ್ಕಾರವು ಸಾರಿರುವ ಭಯೋತ್ಪಾದಕತೆಯು ಯುದ್ಧದ ಸಮರದಲ್ಲಿ ಭಾರತ ಗೆಲ್ಲುವುದು ಅಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ದೇಶದ ನೌಕರ ಶಾಹಿಯನ್ನು ಕೂಡಲೇ ಚುರುಕುಗೊಳಿಸಬೇಕಾದುದು ಇಂದಿನ ಮೊಟ್ಟಮೊದಲನೆಯ ಕರ್ತವ್ಯವಾಗಿದೆ. ಇತ್ತೀಚೆಗೆ ದೇಶದ ಪ್ರತಿಯೊಂದು ಅಭಿವೃದ್ಧಿ ಯೋಜನೆಯು ನೌಕರ ಶಾಹಿಯು ಅದೇ ನಿಯಮಗಳು

ಮತ್ತು ರೀತಿನೀತಿಗಳಲ್ಲಿ ಸಿಕ್ಕಿ ಹಾಕಿಕೊಂಡು ಹೊರಬರುತ್ತಿವೆ. ಹಿಂದಿನ ಯೋಜನೆಗಳಂತೆಯೇ ಹೊಸ ಯೋಜನೆಗಳು ಸಹ ನಿರ್ಜೀವವಾಗಿ ಉಳಿಯುತ್ತವೆ. ಇದರ ಫಲವಾಗಿ ಯಾವ ಜನರಿಗಾಗಿ ಈ ಯೋಜನೆಗಳು ಸಿದ್ಧವಾಗುತ್ತವೋ ಅದೇ ಜನರನ್ನು ಆ ಯೋಜನೆಗಳಿಂದ ದೂರ ಮಾಡಲಾಗುತ್ತಿದೆ! ವಿಶ್ವದಲ್ಲಿ ಭಾರತ ಅತ್ಯಂತ ಕೀಳು ರೀತಿಯ ಆಡಳಿತವನ್ನು ಹೊಂದಿರುವ ದೇಶವಾಗಿದೆ. ಆಡಳಿತದ ಪ್ರತಿಯೊಂದು ಭಾಗ ಅದು ಸಮಾಜ ಕಲ್ಯಾಣ ಇಲಾಖೆ ಇರಬಹುದು. ಆಹಾರ ವಿತರಣೆಯ ವಿಭಾಗವಾಗಿರಬಹುದು, ಪರಿಸರ ವಿಷಯವಾಗಿರಬಹುದು, ಅವೆಲ್ಲವು ಅಗಾಧವಾದ ಭ್ರಷ್ಟಾಚಾರದ ಸುಳಿಯಲ್ಲಿ ಸಿಕ್ಕಿಕೊಂಡಿವೆ. ಭಾರತದ ಪತ್ರಿಕಾ ಮಾಧ್ಯಮವು ಆಡಳಿತದ ಅಧ್ಯಕ್ಷತೆಯ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ ಕಾಶ್ಮೀರದ ಸುದ್ದಿಗಳು ಮತ್ತು ಪಾಕಿಸ್ತಾನದ ಅಧ್ಯಕ್ಷ ಪರವೇಜ ಮುಷರಫ್ ರವರ ಭೇಟಿ ಮಹತ್ವದ ಸುದ್ದಿ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಭಾರತದ ಪ್ರಧಾನಿ ಆಟಲ್ ಬಿಹಾರಿ ವಾಜಪೇಯಿ ತಮ್ಮ ಇತ್ತೀಚಿಗಿನ ನ್ಯೂಯಾರ್ಕ್ ನಗರದ ಭೇಟಿಯ ಸಂದರ್ಭದಲ್ಲಿ ಅಲ್ಲಿಯ ಅನಿವಾಸಿ ಭಾರತಿಯರೊಂದಿಗೆ ಮಾತನಾಡುವಾಗ ಹೇಳಿದ ಮಾತಿನ ಬಗ್ಗೆ ಪತ್ರಿಕೆಗಳು ಒಂದೇ ಒಂದು ಮಾತನ್ನು ಏಕೆ ಬರೆದಿಲ್ಲ? ವಾಜಪೇಯಿ ಅವರು ತಮಾಷೆಯಾಗಿ ಈ ರೀತಿ ಹೇಳಿದರು, “ಅನೇಕ ವರ್ಷಗಳ ನಂತರ ಈಗ ನೌಕರ ಶಾಹಿಯು ಬದಲಾಗುವುದಿಲ್ಲ. ಆದರೆ ಅದಕ್ಕೆ ಬಿದಲಿಗೆ ನಾನೇ ಬದಲಾಗಬೇಕಾಗಿದೆ.” ಅನೇಕ ವರ್ಷಗಳ ನಂತರ ಈ ವಿಷಯ ಗೊತ್ತಾಯಿತು. ಎಂದು ಹೇಳಿ ವಾಜಪೇಯಿ ಅವರು ತಮಗೆ ಉಂಟಾದ ಅರಿವಿನಿಂದ ಆಶ್ಚರ್ಯಪಡಬೇಕಾಗಿಲ್ಲ. ಭಾರತದ ಮಂತ್ರಿಗಳು ಈ ಮಾತುಗಳನ್ನು ಹೇಳುತ್ತಲೇ ಬಂದಿದ್ದಾರೆ. ಆದ್ದರಿಂದ ಈಗಿರುವ ಪದ್ಧತಿಯನ್ನೇ ಉಳಿಸಿಕೊಂಡು ಬರುವುದೇ ಇಂದಿನ ಪರಮಧರ್ಮವಾಗಿದೆ. ಆದರೆ ನಮ್ಮ ದೇಶಕ್ಕೆ ಬಹಳ ಅಗತ್ಯವಾಗಿ ಬದಲಾವಣೆ ಬೇಕಿದೆ. ನಗರಾಭಿವೃದ್ಧಿ ಮಂತ್ರಿ ಅನಂತಕುಮಾರ ಅವರು ಅಧಿಕಾರಿಗಳ ಒಂದು ಸಭೆಯಲ್ಲಿ ಹಿಗೇ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ, ನಮ್ಮ ದೇಶವು ಎರಡು ಸಮಸ್ಯೆಗಳನ್ನು ಹೊಂದಿದೆ. ಒಂದು ಅಧಿಕಾರಿ ಶಾಹಿ ಮತ್ತು ಅವರ ಸಂಕೀರ್ಣವಾದ ಕಾರ್ಯವಿಧಾನಗಳು ಮತ್ತು ಎರಡನೆಯದು ರಾಜಕಾರಣಿಗಳು. ಅವರು ನೌಕರು ಶಾಹಿಯನ್ನು ಮತ್ತು ಅವರ ಸಂಕೀರ್ಣ ಕಾರ್ಯ ಪದ್ಧತಿಗಳನ್ನು ಅರ್ಥ ಮಾಡಿಕೊಳ್ಳಲಾರರು. ಆದ್ದರಿಂದ ಪ್ರತಿಯೊಬ್ಬ ಮಂತ್ರಿಯು ಏನೂ ಮಾಡಬೇಕೆಂಬುದರ ಬಗ್ಗೆ ಯಾವ ಸೂಚನೆಗಳಿಲ್ಲದೆ ತಮ್ಮ ಇಲಾಖಾ ಅಧಿಕಾರಿಗಳ ಕೈಗೊಂಬೆಯಾಗಿ ಬಿಡುತ್ತಾರೆ.

ನಮ್ಮ ಸರ್ಕಾರದಲ್ಲಿ ಕೆಲಸದ ಪ್ರಮಾಣಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಇದ್ದಾರೆ. ಮೂಗಿಗಿಂತ ಮೂಗುತಿ ಭಾರ ಎಂಬ ನಾಣ್ನುಡಿಯಂತೆ ಸರ್ಕಾರದ ಸ್ಥಿತಿಯಾಗಿದೆ. ಇತ್ತೀಚೆಗೆ ಸರ್ಕಾರಕ್ಕೆ ಸಲ್ಲಿಸಲಾದ ಹಾರ್ನಳ್ಳಿ ರಾಮಸ್ವಾಮಿ ಆಡಳಿತ ಸುಧಾರಣಾ ಸಮಿತಿಯು ೧೩ ಸಾವಿರ ಹೆಚ್ಚುವರಿ ನೌಕರರ ವಜಾಕ್ಕೆ ಹಾಗೂ ಆಡಳಿತದಲ್ಲಿಯ ದುಂದು ವೆಚ್ಚಗಳ ಮೇಲೆ ಕಡಿವಾಣ ಹಾಕಲು ಸೂಚಿಸಿದೆ. ಸರ್ಕಾರದ ಒಟ್ಟು ಬಜೆಟ್‌ನಲ್ಲಿ ಶೇಕಡ ೬೦ಕ್ಕೂ ಹೆಚ್ಚು ಭಾಗ ಜನರ ಯೋಗ ಕ್ಷೇಮಕ್ಕೆ ಖರ್ಚಾಗುವುದರ ಬದಲು ನೌಕರರ ವೇತನಕ್ಕಾಗಿಯೇ ಖರ್ಚಾಗುತ್ತಿರುವುದು ದೇಶ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ. ಈಗ ನಮ್ಮ ಸರ್ಕಾರವು ಅನುಸರಿಸುತ್ತಿರುವ ಜಾಗತೀಕರಣ ಹಾಗೂ ಉದಾರೀಕರಣದ ನೀತಿಯಿಂದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ದಲ್ಲಿ ನಿರುದ್ಯೋಗ ಸಮಸ್ಯೆ ಉಂಟಾಗುತ್ತಿದೆ. ಉದಾಹರಣೆಗೆ ಕಳೆದ ೧೦ ವರ್ಷಗಳಲ್ಲಿ ೧೭ ಲಕ್ಷ ಚಿಕ್ಕ ಉದ್ಯೋಗಗಳು ಮುಚ್ಚಿ ಹೋಗಿ ೧೩ ಲಕ್ಷ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಅಲ್ಲದೆ ದೇಶದ ೬ ಲಕ್ಷ ಗ್ರಾಮಗಳಲ್ಲಿ ಯಾವುದೇ ಒಂದು ಉದ್ಯೋಗ ಲಾಭಕರವಾಗಿ ನಡೆಯುವ ಪರಿಸ್ಥಿತಿ ಇಲ್ಲ. ಸಮಾಜ ಕಲ್ಯಾಣ ಕಾರ್ಯಕ್ರಮಗಳಾದ ಅಂಗವಿಕಲರ ಭತ್ಯೆ ವೃದ್ಧಾಪ್ಯವೇತನ, ವಿಧವಾ ವೇತನ ಮುಂತಾದ ಅನುಕಂಪದ ಭತ್ಯವನ್ನು ಪಡೆಯಬೇಕಾದರೆ ಲಂಚವನ್ನು ಕೊಡಬೇಕಾಗಿದೆ. ಖಾದಿ ಬಟ್ಟೆಯ ಮೇಲೆ ಸರ್ಕಾರ ಕೊಡುವ ಪ್ರೋತ್ಸಾಹ ಧನವನ್ನು ಸರ್ಕಾರದಿಂದ ಪಡೆಯಬೇಕಾದರೆ ಲಂಚವನ್ನು ಕೊಡಬೇಕಾಗಿದೆ. ಈ ರೀತಿ ದೇಶದ ಇಡೀ ಆಡಳಿತ ಯಂತ್ರವೇ ಕೆಟ್ಟು ಹೋಗಿದೆ. ಇಂಥ ಕೆಲಸಕ್ಕೆ ಬಾರದ ಆಡಳಿತ ಯಂತ್ರವನ್ನು ಮತ್ತು ಅಧಿಕಾರ ಶಾಹಿಯನ್ನು ಇಟ್ಟುಕೊಂಡು ನಮ್ಮ ದೇಶ ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಹಾಗೂ ಭಯೋತ್ಪಾದಕತೆಯಂಥ ಗಂಡಾಂತರಗಳನ್ನು ಎದುರಿಸಲು ಖಂಡಿತ ಸಾಧ್ಯವಿಲ್ಲ. ಈ ಮಾತನ್ನು ನಮ್ಮ ದೇಶದ ನಾಯಕರು ಎಷ್ಟು ಬೇಗ ಅರಿತುಕೊಳ್ಳುತ್ತಾರೋ ಅಷ್ಟೂ ದೇಶಕ್ಕೆ ಕ್ಷೇಮ. ★

ವಾಚಕರಲ್ಲಿ ವಿನಂತಿ

"ಜನಪದ ವಿಚಾರ"ವನ್ನು ತಮ್ಮ ಸ್ನೇಹಿತರಿಗೂ, ಬಂಧುಗಳಿಗೂ ಪರಿಚಯ ಮಾಡಿಕೊಟ್ಟು ಅದರ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

—ಪ್ರಕಾಶಕರು

ಮೃತ್ಯುವಿನೊಂದಿಗೆ ಎರಡನೇ ಮುಖಾಮುಖಿಯ ಸಂದರ್ಭದಲ್ಲಿ

--ಸುರೇಂದ್ರ ಕೌಲಗಿ

ಕಳೆದ ಒಂದು ವರ್ಷದ ಅವಧಿಯಲ್ಲಿ ಎರಡು ಬಾರಿ ಮೃತ್ಯುವಿನೊಂದಿಗೆ ಮುಖಾಮುಖಿಯಾಗುವ ಅವಕಾಶ ದೊರೆಯಿತು. ಆದರೆ ಈ ಅವಕಾಶ ಒಳ್ಳೆಯದೇನಲ್ಲ. ಹುಟ್ಟಿದ ಮನುಷ್ಯ ಒಮ್ಮೆ ಸಾಯಲೇಬೇಕು ಮತ್ತು ಹುಟ್ಟುವುದೇ ಸಾಯುವುದಕ್ಕಾಗಿ ಹಾಗೂಸಾಯುವುದು ಹುಟ್ಟುವುದಕ್ಕಾಗಿ ಇತ್ಯಾದಿ ಮಾತುಗಳನ್ನು ನಾನು ಕೇಳಿದ್ದೆನಾದರೂ, ಓದಿದ್ದೆನಾದರೂ ಮಾತುಗಳು ಮತ್ತು ಸಾಯುವ ಅನುಭವವನ್ನು ಮಾತ್ರ ಇದುವರೆಗೂ ಸುಲಭ ಹೇಳುವುದಕ್ಕೆ ಅನುಭವಿಸುವುದಕ್ಕೆ ಕಷ್ಟ ಎಂಬುದನ್ನು ಸಾಬೀತು ಮಾಡಿತು.

ಆರೋಗ್ಯ ಕೆಟ್ಟ ಮೇಲೆ ಆಸ್ಪತ್ರೆ ಸೇರಬೇಕಾದುದು ಅನಿವಾರ್ಯ. ನಮಗೆ ಅದು ಇಷ್ಟವಿಲ್ಲದಿದ್ದರೂ ಸುತ್ತಲಿನ ಬಂಧುಬಳಗ ಮತ್ತು ಅಭಿಮಾನಿಗಳು ಜನ ಸುಮ್ಮನಿರಬೇಕಲ್ಲ. ತಮ್ಮ ಅನುಕಂಪದ ಕಾರಣದಿಂದಾಗಿ ನಿಮ್ಮನ್ನು ಕಡ್ಡಾಯವಾಗಿ ಹತ್ತಿರದಲ್ಲಿರುವ ಯಾವುದಾದರೊಂದು ಒಳ್ಳೆಯ ಆಸ್ಪತ್ರೆಗೆ ಕರೆದುಕೊಂಡು ಹೋಗಿಯೇ ಹೋಗುತ್ತಾರೆ. ನಿಮ್ಮ ವಿರೋಧವಾಗಲೀ, ಕೋಪವಾಗಲೀ ಅಲ್ಲಿ ನಡೆಯದು. ನೀವು ಸೋಲಲೇಬೇಕಾಗುತ್ತದೆ ಮತ್ತು ಆಸ್ಪತ್ರೆಯೆಂಬ ಪಂಜರದೊಳಗೆ ಹೋಗಿ ಮಲಗಬೇಕಾಗುತ್ತದೆ. ನಾನು ಸ್ವಭಾವತಃ ಹೆದರಿಕೆಯ ಮನುಷ್ಯ. ಈ ಮೊದಲು ಹೊಟ್ಟೆಯ ನೋವಿನ ಕಾರಣದಿಂದಾಗಿ ಆಸ್ಪತ್ರೆ ಸೇರಿ ಹೊಟ್ಟೆ ಕುಯಿಸಿಕೊಂಡು ಅತಿಯಾದ ರಕ್ತದ ಒತ್ತಡಕ್ಕೆ ಬಲಿಯಾಗಿ ಪೂರ್ಣತಃ ಪ್ರಜ್ಞೆ ಕಳೆದುಕೊಳ್ಳಬಹುದಾಗಿದ್ದ ಕೋಮಾಕ್ಕೆ ಹೋಗಬೇಕಾದ ಸ್ಥಿತಿಗೆ ತಲುಪಿದ್ದು ಉಪಚಾರದ ವೇಳೆಯಲ್ಲಿ ನನ್ನನ್ನು ತೀವ್ರ ಆರೈಕೆ ವಿಭಾಗದ ಒಂದು ತೊಟ್ಟಿಲು ರೀತಿಯ ಮಂಚದ ಮೇಲೆ ಮಲಗಿದ್ದು ನನ್ನ ಮನಃಪಟಲದ ಮೇಲೆ ಬಹಳ ಭಯಾನಕ ಪರಿಣಾಮ ಉಂಟುಮಾಡಿದುದರಿಂದ ಈಗ ಸೆಪ್ಟಂಬರ್ ತಿಂಗಳಲ್ಲಿರಕ್ತದ ಕಡಿಮೆ ಒತ್ತಡದ ಕಾರಣದಿಂದಾಗಿ ಉಂಟಾದ ತಲೆತಿರುಗುವಿಕೆ ಮತ್ತು ಮೃದು ಪಾರ್ಶ್ವವಾಯು ಹೊಡೆತದ ಕಾರಣದಿಂದಾಗಿ ಪುನಃ ಆಸ್ಪತ್ರೆ ಸೇರಬೇಕಾಗಿಬಂತು.

ಶ್ರೀ ಬಿ. ಆರ್. ಪ್ರಾಣೇಶರಾವ್ ದಿನಾಲು ತಪ್ಪದೇ ಬಂದು ನನಗೆ ಧೈರ್ಯ ಕೊಡುತ್ತಿದ್ದರು. ತಾವು ಸ್ವತಃ ಅನುಭವಿಸಿದ ಹಲವಾರು ಬಗೆಯ ಆಪರೇಶನ್‌ಗಳ ಬಗ್ಗೆ ಹೇಳುತ್ತಿದ್ದರು ಹಾಗೂ ತಾವು ಧೈರ್ಯವಾಗಿದ್ದುಕೊಂಡು ಎಲ್ಲವನ್ನೂ

ಹೇಗೆ ಎದುರಿಸಿದರೆಂಬುದನ್ನು ವಿವರವಾಗಿ ಹೇಳುತ್ತಿದ್ದರು. Intensive Care Unit ಬಗ್ಗೆ ಸ್ವಲ್ಪವೂ ಹೆದರಬೇಕಾಗಿಲ್ಲವೆಂದು ಹೇಳಿದರು. ಅವರು ಅದನ್ನು Intensive God's Care Unit ಎಂದು ಭಾವಿಸಿ ಸ್ಥಿತಪ್ರಜ್ಞತೆಯಿಂದ ವಿಶ್ರಾಂತಿ ಪಡೆಯುತ್ತಿದ್ದರೆಂಬುದನ್ನು ಹೇಳುತ್ತಿದ್ದರು. ನಮ್ಮೆಲ್ಲರ ನೆಚ್ಚಿನ ನಾಯಕರಾಗಿದ್ದ ಶ್ರೀ ಜಯಪ್ರಕಾಶ ನಾರಾಯಣ ಮುಂಬೈಯ ಜಸ್‌ಲೋಕ ಆಸ್ಪತ್ರೆಯಲ್ಲಿ ವಾರಕ್ಕೆ ೩ ಸಲ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಗುತ್ತಿದ್ದುದು ಮತ್ತು ಆಗುತ್ತಿದ್ದ ಅಗಾಧವಾದ ನೋವು ಮತ್ತು ಅವರು ಅದನ್ನು ಸಹಿಸಿಕೊಂಡ ಬಗೆ ತಿಳಿದುದೆಲ್ಲವನ್ನು ಹೇಳಿದಾಗ ನನಗೆ ಇನ್ನಷ್ಟು ಧೈರ್ಯ ಬಂತು. ಅದೇ ರೀತಿ ನಮ್ಮ ಸ್ವಾತಂತ್ರ್ಯದ ಅನೇಕ ಹೋರಾಟಗಾರರು ಕಾರಾಗೃಹದಲ್ಲಿ ಅನುಭವಿಸಿದ ಅಮಾನುಷ ಶಿಕ್ಷೆಗಳನ್ನು ಅನುಭವಿಸಿ ಪುನಃ ಅವರು ಹೊರಗೆ ಬಂದು ಏನೆಲ್ಲವನ್ನು ಸಾಧಿಸಿದ ಉದಾಹರಣೆಗಳನ್ನು ಹೇಳುತ್ತಿದ್ದರು. ಬಾಲಗಂಗಾಧರ ತಿಲಕರು ಆರು ತಿಂಗಳು ಒಂದು ಚಿಕ್ಕ ಕೋಣೆಯಲ್ಲಿ ಕಾಲ ಕಳೆಯಬೇಕಾಗಿ ಬಂದುದು ಮತ್ತು ಅಂಥ ಪರಿಸ್ಥಿತಿಯಲ್ಲಿಯೇ "ಗೀತಾರಹಸ್ಯ" ಎಂಬಂಥ ದೊಡ್ಡ ಗ್ರಂಥವನ್ನು ಬರೆದುದನ್ನು ಹೇಳಿದರು. ಹೇಗೆ ವೀರ್ ಸಾವರ್‌ಕರ್ ದೂರದ ಅಂಡಮಾನ್ ದ್ವೀಪದಲ್ಲಿ ಶಾರೀರಿಕ ಮತ್ತು ಮಾನಸಿಕ ಪೀಡೆಗಳನ್ನು ಅನುಭವಿಸಿ ಸ್ವಾತಂತ್ರ್ಯಕ್ಕಾಗಿ ಸಮುದ್ರದಲ್ಲಿ ನೆಗೆದು ಈಜಿ ಪಾರಾಗಿ ಬಂದ ದೃಷ್ಟಾಂತವನ್ನು ತಿಳಿಸಿದರು. ಅದೇ ರೀತಿ ಸುಭಾಷ್ ಚಂದ್ರಬೋಸ್ ಆರು ತಿಂಗಳ ಕಾಲ ಸಬ್‌ಮೆರಿನ್‌ನಲ್ಲಿ ಕುಳಿತು ಪ್ರಯಾಣ ಮಾಡಿದ ಘಟನೆಯನ್ನು ತಿಳಿಸಿದರು.

ಆಸ್ಪತ್ರೆಗೆ ಬಂದಾಗ ನಿಜವಾಗಿಯೂ ನನ್ನ ಜಂಘಾಬಲವೇ ಉಡುಗಿ ಹೋಗಿತ್ತು ಮತ್ತು ಪುನಃ ಅದೇ ತೀವ್ರ ಆರೈಕೆ ವಿಭಾಗದಲ್ಲಿ ಮಲಗಿಸಿದಾಗ ನನ್ನ ಸುತ್ತಲಿನ ಜಗತ್ತೆಲ್ಲವೂ ಶೂನ್ಯವತ್ತಾಗಿ ಕಾಣಲು ಪ್ರಾರಂಭವಾಯಿತು. ಇದು ಸಾಲದೆಂಬಂತೆ ನನ್ನ ಪಕ್ಕದ ಮಂಚದ ಇನ್ನೊಬ್ಬ ರೋಗಿ ಮಲಗಿದ್ದ. ಅವನು ವಿವಿಧ ರೀತಿಯಲ್ಲಿ ನರಳಾಡುತಿದ್ದುದು ನನಗೆ ಇನ್ನೂ ಭಯ ಮತ್ತು ಬೇಸರವನ್ನುಂಟು ಮಾಡಿತು. ಸುತ್ತಲೂ ಕಣ್ಣು ಹಾಯಿಸಿದೆ. ಎಲ್ಲೂ ನನ್ನವರೆಂಬುವರು ಕಾಣಬರಲಿಲ್ಲ. ಆಗ ನನಗೆ ಪುರಂದರದಾಸರ ಈ ನಾಮದ ಎರಡು ಸಾಲುಗಳು ನೆನಪಾದವು. ಸತಿಯು ಸುತರು ಹಿತರು ಎಂದು ಮತಿಯು ಮರೆತು ತಿರುಗಬೇಡ ಮತಿಯು ಮರೆತು ಹೋದ ಮೇಲೆ ಸತಿಯು ಸುತರು ಬರುವರೇ?" ನನ್ನ ಎರಡು ಗಂಡು ಮಕ್ಕಳು ಸಂತೋಷ ಮತ್ತು ಸುಘೋಷ ಹಾಗೂ ಹೆಂಡತಿ ಗಿರಿಜಾ ಕಾಣದಿದ್ದಾಗ ಎಲ್ಲಿಲ್ಲದ ಗಾಬರಿ ಉಂಟಾ

೨೮ ನೇ ಪುಟಕ್ಕೆ

ರಾಷ್ಟ್ರಕ್ಕೊಂದು ನಿವೇದನೆ

ನಮ್ಮ ದೇಶ ಇಂದು ಒಂದು ವಿಷಮ ಪರಿಸ್ಥಿತಿಯಲ್ಲಿದೆ. ಎಲ್ಲ ವಿಚಾರವಂತ ನಾಗರಿಕರಿಗೂ ಇದು ತುಂಬ ಕಳವಳಕಾರಿ ವಿಷಯವಾಗಿದೆ.

ದಾರಿದ್ರ್ಯ ಮತ್ತು ಶೋಷಣೆ ಕೊನೆಗೊಳ್ಳುತ್ತವೆ; ದೇಶವು ಪ್ರಗತಿ ಮಾರ್ಗ ದಲ್ಲಿ ಮುನ್ನಡೆಯುತ್ತದೆ- ಎಂಬ ಆಸೆ, ಸ್ವಾತಂತ್ರ್ಯದ ನಂತರ ಜನತೆಯ ಮನಸ್ಸಿನಲ್ಲಿ ಸಹಜವಾಗಿಯೇ ಮೂಡಿತ್ತು. ಒಳ್ಳೆಯ ದಿನಗಳು ಬಂದಾವು, ಎಂಬ ನೆಚ್ಚಿಕೆಯಲ್ಲಿ ಈ ಮೂವತ್ತೈದು ವರ್ಷಗಳು ಕಳೆದವು.

ಸಧ್ಯದ ಪರಿಸ್ಥಿತಿ

ಈ ಅವಧಿಯಲ್ಲಿ ಏನೂ ಆಗಿಲ್ಲ ಎಂದಲ್ಲ. ಅನೇಕ ಅಭಿವೃದ್ಧಿ ಯೋಜನೆ ಗಳನ್ನು ಕೈಗೊಳ್ಳಲಾಯಿತು. ಅವುಗಳಿಂದ ಕೊಂಚ ಪರಿಣಾಮವೂ ಆಯಿತು. ಆದರೆ ಈ ಯೋಜನೆಗಳ ನೀತಿ ಮತ್ತು ಆದ್ಯತೆಗಳ ದಿಶೆ ಮಾತ್ರ ತಪ್ಪಾಯಿತು, ಆದ್ದರಿಂದ ಬಡತನ. ಬೆಲೆ ಏರಿಕೆ, ನಿರುದ್ಯೋಗ, ಅಸಮಾನತೆ ಮತ್ತು ಶೋಷಣೆ ಇವುಗಳು ದಿನಂ ಪ್ರತಿ ಹೆಚ್ಚುತ್ತಲೇ ಹೋದವು. ದೇಶದ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿ ವೆಚ್ಚವಾಗಿದೆ. ಆದರೆ ಅದರ ಲಾಭವೆಲ್ಲ ಮೇಲ್ವ ರ್ಗದ ಕೆಲವೇ ಮಂದಿಗೆ ದೊರೆತಿದೆ. ಈ ಹಿಡಿ ಮಂದಿ ತಮಗಾಗಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದರು. ಇತ್ತ ಶ್ರೀ ಸಾಮಾನ್ಯನಿಗೆ ಮೂಲ ಭೂತ ಅವಶ್ಯಕತೆಗಳು ಸಹ ಸಿಗಲಾರದಂತಾಗಿವೆ. ಸರ್ಕಾರದ, ವ್ಯರ್ಥ ದುಂದು ವೆಚ್ಚ, ಅಧಿಕಾರಿಗಳ ಮತ್ತು ಮಂತ್ರಿಗಳ ಭೋಗವಿಲಾಸ, ಜೀವನದ ವ್ಯವಸ್ಥೆ. ಇವುಗಳಿಂದ ದೇಶದ ಸಂಪತ್ತು ದೊಡ್ಡ ಪ್ರಮಾಣದಲ್ಲಿ ದುರುಪಯೋಗ ವಾಯಿತು. ಅನೇಕ ಸಂಕಷ್ಟಗಳನ್ನು ಸಮಾಜ ಎದುರಿಸಬೇಕಾಯಿತು. ಆದರೆ ಶತಮಾನಗಳ ತಪಸ್ಸಿನಿಂದ ಗಳಿಸಿದ ಪರಸ್ಪರ ಸಹಕಾರ ಮತ್ತು ತ್ಯಾಗ ಇವಕ್ಕೆ ವಿರುದ್ಧವಾಗಿ ಸರ್ಕಾರಿ ಯೋಜನೆಗಳೆಲ್ಲ ರೂಪಿತವಾದವು. ಇದರಿಂದ ನೈತಿಕ ಮತ್ತು ಸಾಂಸ್ಕೃತಿಕ ಅವನತಿಯಾಗತೊಡಗಿತು. ಈಗ ಜೀವನದ ಎಲ್ಲ ಕ್ಷೇತ್ರ ಗಳಲ್ಲಿ ಭ್ರಷ್ಟಾಚಾರ ಹರಡುತ್ತಿದೆ. ಇಡೀ ಸಮಾಜದ ಚೌಕಟ್ಟು ಟೊಳ್ಳಾಗಿ, ಶಿಥಿಲಗೊಂಡಿದೆ. ಪರಸ್ಪರ ಅಪನಂಬಿಕೆ, ಹಿಂಸಾಚಾರ ಮತ್ತು ಗುಂಡಾಗಿರಿ ಹೆಚ್ಚಿ, ಜನ ಸಮುದಾಯದ ಬಾಳಿಗೆ ಸುರಕ್ಷತೆಯೇ ಇಲ್ಲದೆ ದುಃಖಮಯ ವಾಗಿದೆ.

ರೈತ, ಕೂಲಿಕಾರ, ಕಸಬುದಾರ ಮುಂತಾದ ದುಡಿಯುವ ಉತ್ಪಾದಕರಿಗೆ ಉಚಿತ ಬೆಲೆಗಳು ಸಿಗದಂತಾಯಿತು. ಕೈಗಾರಿಕೋದ್ಯಮಿಗಳಿಗೆ, ದಳ್ಳಾಳಿಗಳಿಗೆ ಸಿಕ್ಕಾಪಟ್ಟೆ ಲಾಭಗಳಿಸುವ ಅವಕಾಶ ದೊರೆಯಿತು. ಇದರಿಂದ ಗ್ರಾಮ ಮತ್ತು ನಗರಗಳ ಮಧ್ಯೆ ಇರುವ ವಿಷಮತೆ ಬೆಳೆಯುತ್ತಾ ಹೋಯಿತು. ಈ ಶೋಷಣೆಯಲ್ಲಿ ನೌಕರಶಾಹಿ ಮತ್ತು ಬುದ್ಧಿಜೀವಿವರ್ಗ ಹಿಂದುಳಿಯಲಿಲ್ಲ. ಲೈಸನ್ಸ್, ಪರ್ಮಿಟ್, ಕೋಟಾ, ಇವಕ್ಕೆ ಸಂಬಂಧಿಸಿದ ರಾಶಿ ರಾಶಿ ಕಾಯಿದೆಕಟ್ಟಳೆಗಳು, ಅಶಿಕ್ಷಿತ ಮತ್ತು ಬಡವನಾದ ಶ್ರೀಸಾಮಾನ್ಯನು ತಲೆ ಎತ್ತದಂತೆ ಅದುಮಿ ಬಿಟ್ಟಿವೆ ಜನತೆಗೆ ಎರಡೇ ಮಾರ್ಗ ಉಳಿದಿವೆ. ಒಂದು, ಈ ಕಾಯಿದೆ ಕಾನೂನುಗಳನ್ನು ಪಾಲಿಸುತ್ತ, ಬಂದ ಕಷ್ಟಗಳನ್ನೆಲ್ಲಾ ಅನುಭವಿಸುತ್ತ ಹೋಗುವುದು; ಅಥವಾ ಭ್ರಷ್ಟಾಚಾರದ ಸರಳ ಮಾರ್ಗವನ್ನು ತಾವೂ ಹಿಡಿಯುವುದು. ಇದರಿಂದ ಜನತೆಯು ಭಯ ಅಥವಾ ದುರಾಸೆಯ ವಿಷಚಕ್ರದಲ್ಲಿ ಸಿಕ್ಕಿಕೊಂಡು ನಿಸ್ಸಹಾಯಕವಾಗಿದೆ. ಜನತೆಯಲ್ಲಿ ಅಧಿಕಾರದ ದುರುಪಯೋಗದ ವಿರುದ್ಧ ಎದ್ದು ನಿಂತು, ತಮ್ಮನ್ನು ರಕ್ಷಿಸಿಕೊಳ್ಳುವ ಶಕ್ತಿ ಜನತೆಯಲ್ಲಿ ನಾಶವಾಗಿದೆ. ಅಧಿಕಾರದಿಂದ ಹೊರಗೆ ಇರುವ ಸಮಾಜ ಸೇವಕರು ಮತ್ತು ಬುದ್ಧಿವಂತ ನಾಗರಿಕರು ಸಹ, ಇಂದಿನ ಪರಿಸ್ಥಿತಿಗೆ ಕಡಿಮೆ ಜವಾಬ್ದಾರರೇನಲ್ಲ. ಏಕೆಂದರೆ ಈ ಅಶುದ್ಧ ಪ್ರವಾಹವನ್ನು ತಡೆಗಟ್ಟಲು ಯಾವುದೇ ಪ್ರಭಾವಯುತ ಕಾರ್ಯವನ್ನು ಅವರು ಕೈಗೊಳ್ಳಲಿಲ್ಲ.

ಅಧಿಕಾರ ಮತ್ತು ಜನತೆ

ಸಾಮಾನ್ಯವಾಗಿ ಇಂದು ಅಧಿಕಾರವು ಸಮಸ್ಯೆಗಳನ್ನು ಬಗೆಹರಿಸುವ ಬದಲು, ಜನತೆಯನ್ನು ಶೋಷಿಸುವ ಮತ್ತು ತುಳಿಯುವ ಸಾಧನವಾಗಿದೆ. ವಿದೇಶೀ ರಾಜ್ಯಭಾರದಲ್ಲಿ ಈ ಸಾಮ್ರಾಜ್ಯವಾದಿಗಳು ರಚಿಸಿದ್ದ ಕಾಯಿದೆ ಕಟ್ಟಳೆಗಳು, ನ್ಯಾಯಾಲಯ, ಪೋಲೀಸು, ಜೈಲು ಇತ್ಯಾದಿ ವ್ಯವಸ್ಥೆಯೆಲ್ಲ ಪ್ರಜಾಪ್ರಭುತ್ವ ಎನಿಸಿಕೊಂಡಿರುವ ಸ್ವತಂತ್ರ ಭಾರತದಲ್ಲೂ ಮೊದಲು ಇದ್ದ ಹಾಗೆಯೇ ಮುಂದುವರಿಯುತ್ತಿವೆ. ಇಷ್ಟೇ ಅಲ್ಲ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅವುಗಳನ್ನು ಬಲಗೊಳಿಸಲಾಗುತ್ತಿದೆ. ಆರ್ಥಿಕ ಕ್ಷೇತ್ರದಲ್ಲಿ ರಾಷ್ಟ್ರೀಯ ಮತ್ತು ಬಹು ರಾಷ್ಟ್ರೀಯ ಸಂಸ್ಥೆಗಳ ಮೂಲಕ, ಸಾಮಾನ್ಯ ಜನತೆಯ ಶೋಷಣೆ ಒಂದೇ ಸಮನೆ ಹೆಚ್ಚುತ್ತಾ ಇದೆ. ಶಿಕ್ಷಣ ಪದ್ಧತಿ, ಭಾಷಾ ನೀತಿ ಮತ್ತು ಸಾಂಸ್ಕೃತಿಕ ಮೌಲ್ಯಗಳು ಸಹ, ಶೋಷಣಕಾರಿ ವ್ಯವಸ್ಥೆಗೆ ಅನುರೂಪವಾಗಿಯೇ ನಡೆಯುತ್ತಿವೆ. ಶೋಷಣೆಯನ್ನು ಬೆಳೆಸಿಕೊಂಡು ಹೋಗುವ ಆಕಾಂಕ್ಷೆ, ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ನಡೆಯುವ ಹೋರಾಟ, ಇವು ನ್ಯೂಕ್ಲಿಯರ್ ಶಸ್ತ್ರಗಳ

ಸ್ಪರ್ಧೆಗೆ ಜನ್ಮಕೊಟ್ಟು, ಪ್ರಪಂಚವನ್ನು ಸರ್ವನಾಶದ ತುಟ್ಟ ತುದಿಗೆ ಮುಟ್ಟಿಸಿವೆ.

ಇತ್ತೀಚಿನ ಕೆಲವು ವರ್ಷಗಳಲ್ಲಿ ಅಧಿಕಾರದ ಹೊಸರೂಪ ಪ್ರಕಟವಾಗುತ್ತಿದೆ. ಇಂದಿನ ಪ್ರಜಾಪ್ರಭುತ್ವದಲ್ಲಿ ಜನತೆಗೆ ದೊರೆತಿರುವ ಅಲ್ಪಸ್ವಲ್ಪ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು, ಮೊಟಕು ಮಾಡುವ ಅಥವಾ ಸಂಪೂರ್ಣವಾಗಿ ನಾಶಮಾಡುವ ಪ್ರಯತ್ನ ನಡೆಯುತ್ತಿದೆ. ನ್ಯಾಯಾಂಗ, ಪತ್ರಿಕೆ ಇತ್ಯಾದಿಗಳು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಹೊಸ ಹೊಸ ಗಂಡಾಂತರಗಳನ್ನು ಎದುರಿಸಬೇಕಾಗಿದೆ. ಪ್ರಜಾತಾಂತ್ರಿಕ ಸಾಮಾನ್ಯ ನಡವಳಿಕೆಗಳು ಸಹ ಪರಿಣಾಮಕಾರಿಯಾಗಿಲ್ಲ. ವಿಧಾನಸಭೆಗಳು, ಪಾರ್ಲಿಮೆಂಟ್‌ಗಳು, ಪಕ್ಷಗಳ ಶಕ್ತಿ ಪರೀಕ್ಷೆಯ ಅಖಾಡಗಳಾಗಿವೆ ಅಥವಾ ವ್ಯಾಪಾರದ ಸಂತೆಗಳಾಗಿವೆ. ಚುನಾವಣೆಗಳು ದುಡ್ಡು, ದೊಣ್ಣೆ, ಜಾತಿ, ಪೊಳ್ಳು ಘೋಷಣೆಗಳನ್ನು ಅವಲಂಬಿಸಿವೆ. ಜನತಾಂತ್ರಿಕ ಪ್ರತಿಕ್ರಿಯೆಗಳು ಈ ರೀತಿ ಪ್ರಭಾವ ಹೀನವಾಗಿರುವಾಗ, ರಾಜಕೀಯ ಪಕ್ಷಗಳು ತಮ್ಮ ಇರುವಿಕೆಯ ಅವಶ್ಯಕತೆಯನ್ನು ಕಳೆದುಕೊಳ್ಳುತ್ತಿವೆ. ಇದರ ಪರಿಣಾಮವಾಗಿ ಕೆಲವು ಪಕ್ಷಗಳು ಚೂರುಚೂರಾಗುತ್ತಿದ್ದರೆ ಮತ್ತೆ ಕೆಲವು ಸರ್ವಾಧಿಕಾರದತ್ತ ಸಾಗುತ್ತಿವೆ.

ಸ್ವಾತಂತ್ರ್ಯದ ನಂತರ ಜನತೆಯ ಶಕ್ತಿ ಮತ್ತು ಪ್ರತಿಕ್ರಿಯೆ ಬೆಳೆಯುತ್ತಾ ಹೋಗಬೇಕಿತ್ತು. ಆದಕ್ಕೆ ಬದಲಾಗಿ ಜನತೆಯ ಶಕ್ತಿ ಕ್ರಮೇಣ ಕುಗ್ಗುತ್ತಾ ಹೋಗುತ್ತಿದೆ. ಅಧಿಕಾಂಶ ಜನತೆಯ ನಿತ್ಯ ಜೀವನವೆಲ್ಲ ಸರ್ಕಾರದ ಹಿಡಿತದಲ್ಲಿ ಸಿಕ್ಕಿಕೊಂಡಿದೆ. ಸ್ವರಾಜ್ಯದ ನಂತರ ತಾವೇನು ಮಾಡಬೇಕಾದುದಿಲ್ಲ, ಎಲ್ಲವನ್ನೂ ಸರ್ಕಾರ ಮಾಡುತ್ತದೆಂಬ ಭಾವನೆ ಜನತೆಯಲ್ಲೂ ಸಹ ಮೂಡಿದೆ. ಪ್ರಜಾಪ್ರಭುತ್ವದಲ್ಲಿ ಪ್ರಭುವಾಗಿರಬೇಕಾದ ಜನತೆ ಈಗ ಭಿಕ್ಷುಕನ ಮಟ್ಟಕ್ಕೆ ಇಳಿದಿದೆ. ಒಂದು ಕಡೆ ಭ್ರಷ್ಟ ವ್ಯವಸ್ಥೆ; ಮತ್ತೊಂದು ಕಡೆ ಪರಾವಲಂಬಿ ನಿಸ್ಸಹಾಯಕ ಜನತೆ. ಇದರ ಪರಿಣಾಮವೇ ಸಧ್ಯದ ಸಂಕಟ ಸ್ಥಿತಿಗೆ ಮೂಲ ಕಾರಣವಾಗಿದೆ.

ಮುಕ್ತಿಯ ಉಪಾಯ

ನಿರ್ಬಲ ಜನತೆ, ಭ್ರಷ್ಟ ತಂತ್ರ ಜೊತೆಗೂಡಿ ನಡೆಯುವ ಪ್ರಜಾತಂತ್ರದ ಅಪಾಯವನ್ನು ಮಹಾತ್ಮ ಗಾಂಧಿಯವರು ಬಹು ಹಿಂದೆಯೇ ಸ್ಪಷ್ಟವಾಗಿ ಕಂಡಿದ್ದರು. ಅವರ ಮಾತು ಹೀಗಿದೆ: "ಸ್ವಾತಂತ್ರ್ಯವು ತಳಹದಿಯಿಂದ ಪ್ರಾರಂಭವಾಗಬೇಕು. ಎಲ್ಲ ಗ್ರಾಮಗಳೂ ಗಣತಂತ್ರ ಅಥವಾ ಪ್ರಜಾಪ್ರಭುತ್ವಗಳಾಗಿ ಪೂರ್ಣ ಅಧಿಕಾರ ಹೊಂದಿರಬೇಕು. ಇದರ ಅರ್ಥ ಪ್ರತಿ ಗ್ರಾಮವು

ಸ್ವಾವಲಂಬಿಯಾಗಿರಬೇಕು. ತನ್ನ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳ ಬೇಕು. ತನ್ನ ಎಲ್ಲ ಆಗು ಹೋಗುಗಳನ್ನು ತಾನೇ ನಿರ್ಧರಿಸಿಕೊಳ್ಳುವ ಶಕ್ತಿ ಯನ್ನು ಪಡೆದಿರಬೇಕು.... ಕೆಲವೇ ಜನ ಅಧಿಕಾರ ಪಡೆದುಕೊಳ್ಳುವುದರಿಂದ ನಿಜವಾದ ಸ್ವರಾಜ್ಯ ಪ್ರಾಪ್ತವಾಗುವುದಿಲ್ಲ. ಆದರೆ ಅಧಿಕಾರ ದುರುಪಯೋಗ ವಾದಾಗ, ಅದನ್ನು ಪ್ರತಿಭಟಿಸುವ ಶಕ್ತಿ, ಎಲ್ಲ ಜನರಿಗೂ ಬಂದಾಗಲೇ ಅದು ಪ್ರಾಪ್ತವಾಗುತ್ತದೆ" ಎಂದು.

ಗಾಂಧೀಜಿಯವರ ಈ ಮಾತನ್ನು ನಾವು ನಿರ್ಲಕ್ಷಿಸಿದ್ದರಿಂದಲೇ ಇಂದಿನ ಗೊಂದಲಮಯ ಸಮಸ್ಯೆಗಳ ಪರಿಸ್ಥಿತಿ ಹುಟ್ಟಿರುವುದು. ಪ್ರತಿಯೊಬ್ಬನೂ ಒಂದಲ್ಲ ಒಂದು ಸಮಸ್ಯೆಯಲ್ಲಿ ಸಿಕ್ಕಿಕೊಂಡು ತೊಳಲಾಡುತ್ತಿದ್ದಾನೆ ಸಮಸ್ಯೆಗಳು ಬೇರೆ ಬೇರೆಯಾಗಿ ಕಂಡರೂ, ಅವು ನಿಜವಾಗಿ ಬೇರೆಯಲ್ಲ. ಅವು ಸದ್ಯದ ಭ್ರಷ್ಟ ಚಾರ ವ್ಯವಸ್ಥೆಯ ಮತ್ತು ಜೀವನದ ಮೌಲ್ಯಗಳ ಪತನದ ಪರಿಣಾಮ.

ಇಂಥ ಕಗ್ಗತ್ತಲೆಯಲ್ಲೂ ಸಹ ಕೆಲವು ಕ್ಷೇತ್ರಗಳಲ್ಲಿ ಪರಿವರ್ತನೆ ಮಾಡುವ ಆಕಾಂಕ್ಷೆಯಿಂದ ಅನೇಕ ನಿಸ್ವಾರ್ಥಿ ವ್ಯಕ್ತಿಗಳು ಪರಿಸ್ಥಿತಿಯನ್ನು ಎದುರಿಸು ತ್ತಿದ್ದಾರೆ. ಇದೊಂದೇ ಆಶಾಕಿರಣ. ಈ ಎಲ್ಲ ಶಕ್ತಿಗಳು ಮಾತ್ರ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಾಧ್ಯ. ಸಮಸ್ಯೆಗಳನ್ನು ಬೇರೆ ಬೇರೆಯಾಗಿ ಅಥವಾ ಅಂಶಿಕವಾಗಿ ಬಿಡಿಸಲು ಹೊರಟರೆ, ಶಕ್ತಿಯೆಲ್ಲ ಕುಂದುತ್ತದೆ. ಈಗಿನ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ, ವಿಕೇಂದ್ರಿತ ಶೋಷಣರಹಿತ ಸ್ವಾವಲಂಬಿ ಸಮಾಜ ನಿರ್ಮಾಣಕ್ಕೆ ಜನತೆಯನ್ನು ಸಿದ್ಧಗೊಳಿಸುವುದೊಂದೇ, ಇಂದಿನ ಅಪಾಯಕಾರಿ ಪರಿಸ್ಥಿತಿಯಿಂದ ಮುಕ್ತರಾಗಲು ನಮಗಿರುವ ಉಪಾಯ. ಆದರ್ಶದ ಸಾಧನೆಗಾಗಿ ಅಲ್ಲ ಇಂದಿನ ಹೋರಾಟ; ನಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಹೋರಾಟ. ಜನತೆಯಲ್ಲಿ ಹರಡಿರುವ ನಿರಾಶೆ ಯನ್ನು ಹೋಗಲಾಡಿಸಿ ಆತ್ಮವಿಶ್ವಾಸವನ್ನು ಪುನಃ ಮೂಡಿಸಲು ಇದೊಂದೇ ಮಾರ್ಗ. ಕಾಲ ಕಳೆಯಲಾಗದು. ದಿನ ಕಳೆದಂತೆ ಪರಿಸ್ಥಿತಿ ಉತ್ಕಟವೂ ಹತೋ ಟಿಗೆ ಬಾರದಂಥದೂ ಆಗುತ್ತದೆ. ಪಟ್ಟಭದ್ರ ಹಿತಾಸಕ್ತಿ ಸ್ವಯಂ ಬಲಯುತ. ವಾಗುತ್ತಿದೆ. ಆದ್ದರಿಂದ ಹೊಸ ವ್ಯವಸ್ಥೆಯ ರಚನೆಗಾಗಿ ನಮ್ಮ ಕರ್ತವ್ಯಗಳೇ ನೆಂಬುದನ್ನು ಪ್ರಕಟಿಸುತ್ತ, ಕೆಳಕಂಡ ದಿಶೆಯಲ್ಲಿ ಕಾರ್ಯ ಮುಂದುವರಿಸಲು ರಾಷ್ಟ್ರಕ್ಕೆ ನಿವೇದಿಸಿಕೊಳ್ಳುತ್ತಿದ್ದೇವೆ.

೧. ನಾಗರಿಕನ ಮೂಲಭೂತ ಹಕ್ಕುಗಳಾದ ವ್ಯಕ್ತಿ ಸ್ವಾತಂತ್ರ್ಯ, ಪತ್ರಿಕಾ ಮತ್ತು ನ್ಯಾಯಾಂಗದ ಸ್ವಾತಂತ್ರ್ಯಗಳು ಶುದ್ಧ ಪ್ರಜಾತಂತ್ರ ವ್ಯವಸ್ಥೆಗೆ ತಳಹದಿ.

ಈ ಸ್ವಾತಂತ್ರ್ಯಗಳು ಅವಿಚ್ಛಿನ್ನವಾಗಿ ಮುಂದುವರಿಯಬೇಕು. ಇವುಗಳನ್ನು ಕುಂಠಿತಗೊಳಿಸುವ ಎಲ್ಲ ಗತಿವಿಧಿಗಳ ಬಗ್ಗೆ ಎಚ್ಚರಿಕೆಯಿಂದಿದ್ದು, ಅಹಿಂಸಾತ್ಮಕ ವಾಗಿ ಪ್ರತಿಭಟಿಸಬೇಕು.

೨. ತನ್ನೆಲ್ಲ ಆಡಳಿತ ವ್ಯವಹಾರವನ್ನು ಸ್ವತಃ ತಾನೇ ನಡೆಸುವುದು, ಪ್ರತಿಯೊಂದು ಗ್ರಾಮದ ಆಜನ್ಮಸಿದ್ಧಹಕ್ಕು. ಆದ್ದರಿಂದ ಗ್ರಾಮಕ್ಕೆ ಸೇರಿದ ಜಮೀನು, ಅರಣ್ಯಗಳೂ ಸೇರಿದಂತೆ ಇದರ ವ್ಯವಸ್ಥೆ, ಗ್ರಾಮದ ಜಗಳಗಳನ್ನು ಅಲ್ಲಿಯೇ ತೀರ್ಮಾನಿಸುವುದು, ಸ್ವಚ್ಛತೆ, ಕಾಂಪೋಸ್ಟ್ ಗೊಬ್ಬರ ತಯಾರಿಕೆ, ವ್ಯಸನ ಮುಕ್ತಿ, ಶಿಕ್ಷಣ ಇತ್ಯಾದಿ ತನ್ನ ಹಿತಕ್ಕಾಗಿ ಬೇಕಾಗುವ ಅಗತ್ಯ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಮತ್ತು ಕಾರ್ಯಗತ ಮಾಡುವುದು ಮತ್ತು ಗ್ರಾಮಮಟ್ಟದ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆ ಮತ್ತು ಹತೋಟಿ ಇಟ್ಟುಕೊಳ್ಳುವುದು ಇತ್ಯಾದಿಗಳೆಲ್ಲವೂ ಗ್ರಾಮಸಭೆಯ ಹತೋಟಿಯಲ್ಲಿರಬೇಕು. ಗ್ರಾಮಸಭೆಯಲ್ಲಿ ಮತ್ತು ಸಂಘ ಸಂಸ್ಥೆಗಳಲ್ಲಿ ಗ್ರಾಮದ ನಿಸ್ಸಹಾಯಕ ದೀನ ದಲಿತರು ಪೂರ್ಣ ಭಾಗವಹಿಸುವಂತಾಗಬೇಕು ಅದಕ್ಕೆ ಯೋಗ್ಯವಾದ ಶಕ್ತಿ ಗಳಿಸಲು ಬೇಕಾಗುವ ಕಾರ್ಯಕ್ರಮ ರೂಪಿಸಿಕೊಳ್ಳಬೇಕು.

ಗ್ರಾಮಗಳಂತೆ ನಗರಗಳಲ್ಲಿನ ಜನತೆ, ಮೊಹಲ್ಲ ಮೊಹಲ್ಲಗಳಲ್ಲಿ ಸಂಘಟಿತರಾಗಿ, ಸ್ಥಳೀಯ ಸಮಸ್ಯೆಗಳನ್ನು ಸಾಧ್ಯವಾಗುವ ಮಟ್ಟಿಗೆ ಬಗೆಹರಿಸಲು ತಾವೇ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು.

೩. ಉಳುವವನಿಗೇ ಭೂಮಿ ಸೇರಬೇಕು. ಜಮೀನಿನ ಮೇಲೆ ಗೈರುಹಾಜರಿ, ಮಾಲೀಕತ್ವ ತೊಲಗಬೇಕು. ಗ್ರಾಮೀಣ ಅರ್ಥವ್ಯವಸ್ಥೆಗೆ ಗೋವು ಮತ್ತು ಎತ್ತುಗಳು ಅನಿವಾರ್ಯ ಆಧಾರಗಳು. ಅವುಗಳಿಗೆ ಎಲ್ಲ ತರಹದ ರಕ್ಷಣೆ ಸಿಗಬೇಕು ಮತ್ತು ಅವುಗಳ ಸಂವರ್ಧನೆ ಆಗಬೇಕು. ರೈತನಿಗೆ ತನ್ನ ಕೃಷಿ ಉತ್ಪನ್ನಗಳಿಗೆ ನ್ಯಾಯ ಬೆಲೆ ದೊರೆಯಬೇಕು. ಕೃಷಿಕಾರ್ಮಿಕ ಮತ್ತು ಗ್ರಾಮೀಣ ಕಸುಬುದಾರರಿಗೆ ಯೋಗ್ಯ ಕೂಲಿ ಸಿಗಬೇಕು. ಗ್ರಾಹಕರಿಗೆ ಉಚಿತ ಬೆಲೆಯಲ್ಲಿ ಶುದ್ಧ ವಸ್ತುಗಳು ದೊರೆಯಬೇಕು. ಈ ದಿಶೆಯಲ್ಲಿ ಹೆಜ್ಜೆ ಇಡಬೇಕು. ನಿರುದ್ಯೋಗ ನಿವಾರಣೆ, ಸ್ವಾವಲಂಬನೆ ಮತ್ತು ಅಂತ್ಯೋದಯ ದೃಷ್ಟಿಯಿಂದ ಯೋಜನೆಗಳು ಗ್ರಾಮದಲ್ಲೇ ಗ್ರಾಮಸ್ಥರಿಂದ ತಯಾರಾಗಬೇಕು. ಗ್ರಾಮಗಳಲ್ಲಿ ಗೃಹೋದ್ಯೋಗಗಳು, ಗ್ರಾಮೋದ್ಯೋಗಗಳು ನಡೆಯಬೇಕು. ಗ್ರಾಮನಿಧಿ ಶೇಖರವಾಗಬೇಕು. ಗ್ರಾಮಗಳಲ್ಲಿ ಸಣ್ಣ ಉದ್ಯೋಗಗಳ ಮೂಲಕ ತಯಾರಾಗುವ ವಸ್ತು

ಗಳನ್ನು, ಕೇಂದ್ರಿತ ಕಾರ್ಖಾನೆಗಳಲ್ಲಿ ಉತ್ಪನ್ನವಾಗಲು ಅವಕಾಶವಿರಬಾರದು. ಅಧಿಕ ಶೋಷಣೆಯಿಂದ ತಪ್ಪಿಸಿಕೊಳ್ಳಬೇಕಾದರೆ, ಗ್ರಾಮೋದ್ಯೋಗಗಳೊಡನೆ ಪೈಪೋಟಿ ನಡೆಸುತ್ತಿರುವ ಕೇಂದ್ರೋದ್ಯಮ ವಸ್ತುಗಳು ಬಹಿಷ್ಕಾರ ವಾಗಬೇಕು. ಮಹಾತ್ಮ ಗಾಂಧೀಜಿಯವರ ಕಲ್ಪನೆಗನುಸಾರ, ಸ್ವದೇಶಿ ಉಪ ಯೋಗದ ಮೇಲೆ ಹೆಚ್ಚು ಒತ್ತು ಹಾಕಬೇಕು.

೪. ಸ್ವಾತಂತ್ರ್ಯ ಬಂದ ಮೇಲೂ ಸಹ, ದೊಡ್ಡ ಕೈಗಾರಿಕೆಗಳ ಹಿತದೃಷ್ಟಿ ಯಿಂದಲೇ ಯೋಜನೆಗಳಾಗಿವೆ. ಗ್ರಾಮೀಣ ಕ್ಷೇತ್ರಗಳು ಉಪೇಕ್ಷಿತವಾಗಿವೆ. ಆದರೆ ಈಗ ಶ್ರೀಸಾಮಾನ್ಯನ ದೃಷ್ಟಿಯಿಂದಲೇ ಯೋಜನೆಗಳಾಗಬೇಕು. ವಾತಾ ವರಣ ಸಂರಕ್ಷಣೆ ಮತ್ತು ಮುಂದಿನ ಪೀಳಿಗೆಯ ಅವಶ್ಯಕತೆಗಳನ್ನು ಗಮನದಲ್ಲಿಡ ಬೇಕು. ರಾಷ್ಟ್ರೀಯ ಯೋಜನೆಯಲ್ಲಿ ಶ್ರೀಸಾಮಾನ್ಯನ ಅಗತ್ಯಗಳ ಪೂರೈಕೆಗೆ ಆದ್ಯತೆ ಇರಬೇಕು. ಭೋಗ ಸಂಸ್ಕೃತಿಗೆ ಬೆಂಬಲ ಕೊಡುವ ವಿಲಾಸ ವಸ್ತುಗಳ ಉತ್ಪನ್ನ ಮತ್ತು ಆಮದಿನ ಮೇಲೆ ತಡೆಹಾಕಬೇಕು. ದೊಡ್ಡ ಪ್ರಮಾಣದ ಉದ್ಯೋಗ ಗಳ ಒಡೆತನ ಮತ್ತು ವ್ಯವಸ್ಥೆ ಸಮಾಜದ ಹಿಡಿತದಲ್ಲಿರಬೇಕು. ಅಂದರೆ ಆ ಉದ್ಯೋಗಗಳಲ್ಲಿ ತೊಡಗಿರುವ ಕೆಲಸಗಾರರಿಗೆ, ಕಚ್ಚಾಮಾಲನ್ನು ಒದ ಗಿಸುವ ಉತ್ಪಾದಕರ, ಉಪಭೋಕ್ತರ ಮತ್ತು ಸ್ಥಳೀಯ ಜನತೆಯ ಹಿತ ರಾಜ್ಯದ ಪ್ರತಿನಿಧಿಗಳ ಕೈಯಲ್ಲಿರಬೇಕು.

೫. ಗ್ರಾಮದ ನಂತರ ಜಿಲ್ಲೆ, ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಸರ್ಕಾರ ಹಾಗೂ ಜನತೆಯ ಪ್ರತಿನಿಧಿಗಳ ಮೇಲೆ, ಜನತೆಯ ಪ್ರಭಾವಯುತ ನಿಯಂತ್ರಣ ಇರಬೇಕು. ಅದಕ್ಕಾಗಿ ಪ್ರತಿಯೊಂದು ಮಟ್ಟದಲ್ಲೂ ಲೋಕಸಮಿತಿಗಳ ರಚನೆಯಾಗಬೇಕು. ಜನತೆಯಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಮತದಾರನಿಗೆ ಜವಾಬ್ದಾರನೇ ಹೊರತು, ಪಾರ್ಟಿಗಲ್ಲ. ಚುನಾವಣೆಗಳು ನಿಷ್ಪಕ್ಷವಾಗಿಯೂ ಸ್ವತಂತ್ರವಾಗಿಯೂ ನಡೆಯಬೇಕು. ಅದಕ್ಕಾಗಿ ಚುನಾವಣಾ ಕಾನೂನು ಮತ್ತು ನಿಯಮಗಳಲ್ಲಿ ಸುಧಾರಣೆಯಾಗಬೇಕು. ಪಕ್ಷಾಂತರವನ್ನು ತಡೆಗಟ್ಟಲು ಜನತೆ ಒತ್ತಾಯ ತರಬೇಕು. ರಾಜಕೀಯ ಪಕ್ಷಗಳ ಸಹ ಈ ಬಗ್ಗೆ ಆಚಾರ ಸಂಹಿತೆ ರಚಿಸಿಕೊಂಡು, ಆ ನಿಯಮಗಳನ್ನು ತಪ್ಪದೆ ಪಾಲಿಸಬೇಕು, ರಾಜ ಕೀಯ ಪಕ್ಷಗಳು ರಿಜಿಸ್ಟರಾದ ಸಂಸ್ಥೆಗಳಾಗಬೇಕು. ತಮ್ಮ ಲೆಕ್ಕ ಪತ್ರಗಳನ್ನು ಪ್ರತಿವರ್ಷ ತಪಾಸಣೆ ಮಾಡಿಬೇಕು; ಸಾರ್ವಜನಿಕರ ಅವಗಾಹನೆಗಾಗಿ ಅವು ಗಳನ್ನು ಪ್ರಕಟಿಸಬೇಕು.

೬. ಸಂವಿಧಾನದ ನಿರ್ದೇಶನ ನಿಯಮಗಳಿಗನುಸಾರವಾಗಿ ಮದ್ಯಪಾನ

ನಿರೋಧ ಜಾರಿಗೆ ಬರಬೇಕು. ಮತ್ತು ಮದ್ಯದ ಮಾರಾಟದ ಮೇಲೆ ಕಟ್ಟು ನಿಟ್ಟಾದ ನಿಯಂತ್ರಣವಿರಬೇಕು. ಅದು ರಾಜ್ಯ ಬೊಕ್ಕಸದ ಆದಾಯದ ಬಾಬಾ ಗಿರಬಾರದು. ಕುಡಿಯುವ ಚಟ ಇರುವವರಿಗೆ ತಿಳುವಳಿಕೆ ನೀಡಿ ಕುಡಿತವನ್ನು ಬಿಡಿಸುವ ಪ್ರಯತ್ನ ನಡೆಯಬೇಕು. ವ್ಯವಸ್ಥಿತ ಮಾರ್ಗಗಳಿಂದ ತಮ್ಮ ಗ್ರಾಮ ಗಳನ್ನು ನೆರೆಹೊರೆಯವರನ್ನು ಮದ್ಯದ ಹಿಡಿತದಿಂದ ತಪ್ಪಿಸಲು ಪ್ರಯತ್ನಿಸ ಬೇಕು.

೭. ಸರ್ಕಾರದ ನಿಯಂತ್ರಣ, ಡಿಗ್ರಿ, ಪ್ರಮಾಣಪತ್ರ ಇತ್ಯಾದಿಗಳ ಬಂಧನದಿಂದ ಶಿಕ್ಷಣ ಮುಕ್ತವಾಗಬೇಕು. ಸರ್ಕಾರವು ಶಿಕ್ಷಣಕ್ಕೆ ಸಹಾಯ ನೀಡಲಿ. ಆದರೆ ಅದರ ಮೇಲೆ ಸರ್ಕಾರದ ಅಧಿಕಾರ ಇರಕೂಡದು ಖಾಸಗಿಯವರ ಕೈಯಲ್ಲಿ ಶಿಕ್ಷಣವು ಒಂದು ವ್ಯಾಪಾರ ವ್ಯವಸ್ಥೆಯಾಗಬಾರದು. ಶಿಕ್ಷಣ ಸಂಸ್ಥೆಗಳನ್ನು ನಡೆ ಸುವ ಜವಾಬ್ದಾರಿ ಶಿಕ್ಷಕರ ಶಿಕ್ಷಣಾರ್ಥಿಗಳ ಮತ್ತು ಪೋಷಕರದಾಗಿರಬೇಕು. ಶಿಕ್ಷಣದ ಮೂಲಕ ಬಾಲಕ ಬಾಲಕಿಯರಿಗೆ ಪ್ರಜಾತಂತ್ರೀಯ ಸಹಯೋಗಿ ಸಮಾ ಜದ ವ್ಯಾವಹಾರಿಕ ಅನುಭವಸಿಗುವಂತಾಗಬೇಕು. ಆತ್ಮನಿರ್ಭರತೆ, ಸ್ವಾವಲಂಬನೆ, ಸ್ವತಂತ್ರ ವಿಚಾರ, ವಿವೇಕದ ಆಧಾರದ ಮೇಲೆ, ನೀತಿ ಮತ್ತು ಶೀಲವೃದ್ಧಿ ಶಿಕ್ಷಣದ ಗುರಿಯಾಗಬೇಕು. ಈಗಿನಂತೆ ಖಾಸಗಿ ಶಾಲೆ ಸರ್ಕಾರಿ ಶಾಲೆ ಎಂಬ ಭೇದಗಳಿರಬಾರದು.

೮. ಜಾತಿ, ಸಂಪ್ರದಾಯ, ಲಿಂಗ ಭಾಷೆ, ಉಚ್ಚ ನೀಚ ಮುಂತಾದ ವೈಮನಸ್ಯಗಳಿಂದ ರಾಷ್ಟ್ರೀಯ ಐಕ್ಯತೆ ನುಚ್ಚು ನೂರಾಗಿದೆ. ಜನಜೀವನ ಅಪಾಯದ ಸ್ಥಿತಿಯನ್ನು ಮುಟ್ಟಿದೆ. ಸಹಜೀವನವೇ ಜನತೆಯ ನಿಜವಾದ ನೀತಿ ಪದ್ಧತಿ, ಆದ್ದರಿಂದ ಸಂಕುಚಿತ ಭಾವನೆಗಳು ಮಾಯವಾಗಬೇಕು. ಹರಿಜನ, ಆದಿವಾಸಿ ಮತ್ತು ಅಲ್ಪಸಂಖ್ಯಾತ ಮೇಲೆ ನಡೆಯುತ್ತಿರುವ ಅನ್ಯಾಯ, ಅತ್ಯಾ ಚಾರಗಳು ನಿಲ್ಲಬೇಕು. ಮಹಿಳೆಗೆ ಸಮಾಜದಲ್ಲಿ ಸಮಾನಸ್ಥಾನ ಸಿಗಬೇಕು ವರದಕ್ಷಿಣೆ ಇತ್ಯಾದಿ ಕಟ್ಟು-ಪದ್ಧತಿಗಳು ಕೊನೆಗೊಳ್ಳಬೇಕು ಸಮಾಜದಲ್ಲಿ, ಸುರಕ್ಷತೆಯಿಂದ ಗೌರವಯುತವಾಗಿ ಎಲ್ಲರೂ ಬಾಳುವಂತಾಗಬೇಕು. ಇಂಥ ವಾತಾ ವರಣ ಬೆಳೆಯಬೇಕು. ಅನ್ಯಾಯ ಅತ್ಯಾಚಾರ, ಗೂಂಡಾಗಿರಿಯನ್ನು ಎಲ್ಲ ಮಟ್ಟ ದಲ್ಲೂ ಸುಸಂಘಟಿತ ರೀತಿಯಲ್ಲಿ ಎದುರಿಸಬೇಕು.

೯. ಸರ್ವವ್ಯಾಪಕ ಭ್ರಷ್ಟಾಚಾರ ಈಗ ಸಮಾಜವನ್ನು ಸತ್ವಹೀನ ಮಾಡಿದೆ. ಅದು ಬಡವನ ಅನ್ನವನ್ನು ಕಿತ್ತುಕೊಳ್ಳುತ್ತಿದೆ. ಸಮಾಜದ ಸಹಜ ವಿಕಾಸಕ್ಕೆ ಅಡ್ಡಿ ಬರುತ್ತಿದೆ. ಆದ್ದರಿಂದ ಜನತೆ ಸಂಘಟಿತರಾಗಿ ಎಲ್ಲ ಕ್ಷೇತ್ರಗಳಲ್ಲಿ ಭ್ರಷ್ಟಾ

ಚಾರವನ್ನು ಎದುರಿಸಬೇಕು. ಭ್ರಷ್ಟಾಚಾರದಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಸಾರ್ವಜನಿಕ ಜೀವನದಲ್ಲಿ ಸ್ಥಾನಮಾನ ಸಿಗದಂತಾಗಬೇಕು. ಸ್ವತಃ ಲಂಚ ಕೊಡುವುದಿಲ್ಲವೆಂದು ಪ್ರತಿಯೊಬ್ಬ ವ್ಯಕ್ತಿಯೂ ನಿಶ್ಚಯಿಸಿಕೊಳ್ಳಬೇಕು. ಸಂಘಟಿತ ಪ್ರಯತ್ನದಿಂದ ಭ್ರಷ್ಟಾಚಾರವನ್ನು ಕಡಿಮೆ ಮಾಡಬಹುದು. ಮಾನವ ಗೌರವ ಮತ್ತು ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಮತ್ತು ವ್ಯಕ್ತಿ ಜೀವನದಲ್ಲಿ ನಾವು ಎಷ್ಟರಮಟ್ಟಿಗೆ ಸ್ಥಾಪಿಸಿದ್ದೇವೆ ಎಂಬುದರ ಮೇಲೆ, ಮೇಲೆ ಸೂಚಿಸಿದ ಕಾರ್ಯಕ್ರಮಗಳ ಸಫಲತೆ ಅವಲಂಬಿಸಿದೆ, ಸ್ವಾರ್ಥಕ್ಕಾಗಿ ಸಮಾಜದ ಸರ್ವರ ಹಿತವನ್ನು ಬಲಿ ಕೊಟ್ಟಿದ್ದೇ ತಪ್ಪು ದಾರಿ ಹಿಡಿಯಲು ಕಾರಣ. ಭಾರತೀಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಹಿನ್ನೆಲೆಯು ಸಕಲಜೀವ ರಾಶಿಗಳ ಬಗ್ಗೆ ಅನುಕಂಪದ ಪಾಠವನ್ನು ಕಲಿಸುತ್ತದೆ. ಎಲ್ಲರೀತಿಯ ವಿಘ್ನಗಳನ್ನು ದಾಟಿ ನಿಜವಾದ ಐಕ್ಯತೆ ಕಡೆ ಸಾಗಲು ಪ್ರೇರಣೆ ಕೊಡುತ್ತದೆ.

ಹೊಸ ಸಂಕಲ್ಪ

ಇಂದು ಪುನರುತ್ಥಾನದ ಕಾರ್ಯಕ್ರಮಕ್ಕಾಗಿ ಒಂದು ಹೊಸ ಸಂಕಲ್ಪ, ಹೊಸ ಪ್ರಯತ್ನ ಹೊಸ ವಾತಾವರಣದ ಅವಶ್ಯಕತೆ ಇದೆ. ಜನತೆಯನ್ನು ಎಚ್ಚರಿಸಬೇಕು. ಅವರಲ್ಲಿ ಸ್ಫೂರ್ತಿ ತುಂಬಬೇಕು. ಸಂಘಟಿಸಬೇಕು, ಅದಕ್ಕಾಗಿ ಸ್ವಯಂ ಸಮರ್ಪಣೆ ಮಾಡಿಕೊಂಡು ದುಡಿಯುವ, ಲೋಕಸೇವಕರ ಒಂದು ದೊಡ್ಡ ಸಮೂಹವೇ ಬೇಕಾಗಿದೆ. ಈ ಸೇವಕರು ಗ್ರಾಮ ಗ್ರಾಮಗಳಲ್ಲಿ, ಮೊಹಲ್ಲ ಮೊಹಲ್ಲಗಳಲ್ಲಿ, ಸಂಪೂರ್ಣ ಕ್ರಾಂತಿಯ ಸಂದೇಶವನ್ನು ಮುಟ್ಟಿಸಬೇಕು, ಜನ ಶಕ್ತಿಯನ್ನು ಸಂಘಟಿಸುವುದು ಅಗತ್ಯ. ಹೊಸದೊಂದು ಸಮಾಜ ವ್ಯವಸ್ಥೆಯ ರಚನೆಯಾಗಬೇಕಾಗಿದೆ. ಪಟ್ಟಭದ್ರ ಸ್ವ-ಹಿತಾಸಕ್ತಿಗಳಿಂದ ಬೆಳೆಯುತ್ತಿರುವ ಅನ್ಯಾಯ ಅತ್ಯಾಚಾರಗಳನ್ನು ಎದುರಿಸಲು, ಶುದ್ಧ ಶಾಂತಿಯುತ ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹ ನಡೆಸಲು ಜನತೆಯಲ್ಲಿ ಪ್ರೇರಣೆ ಮೂಡಿಸಬೇಕಾಗಿದೆ.

ನಾವೇನು ಮಾಡೋಣ ?

ಈ ಮಹತ್ಕಾರ್ಯವನ್ನು ಸಾಧಿಸಲು :-

ನೀವು ಎಲ್ಲಿಯೇ ಇರಿ, ಈ ವಿಚಾರಗಳಲ್ಲಿ ಸಹಾನುಭೂತಿಯುಳ್ಳ ಜನರನ್ನು ಹುಡುಕಿ ಅವರನ್ನು ಸಂಘಟಿಸಿ; ಈ ಕೆಲಸಕ್ಕಾಗಿ ಕೊಂಚ ಸಮಯವನ್ನು ಮುಡುಪಾಗಿಡಿ. ದಿನದಲ್ಲಿ ಒಂದು ಗಂಟೆ ಅಥವಾ ವಾರದಲ್ಲಿ ಒಂದು ದಿನ ಸಮಯ ದಾನ ಮಾಡಿ.

ಸ್ವದೇಶಿವ್ರತ ಕೈಗೊಳ್ಳಿ. ಶೋಷಕ ಮತ್ತು ಭ್ರಷ್ಟವ್ಯವಸ್ಥೆಯೊಡನೆ ಸಹ

ಕರಿಸಬೇಡಿ. ಸರಕಾರ ಅಥವಾ ಇತರರಿಗಾಗಿ ಕಾಯಬೇಡಿ. ಸ್ಥಳೀಯವಾಗಿ ಕಾರ್ಯಾನ್ವಿತರಾಗಿ. ಒಂದು ದಿಶೆಯಲ್ಲಿ ಕೆಲಸ ಪ್ರಾರಂಭವಾದರೆ ಅದು ಬೇರೆ ಕಡೆಗೂ ಹರಡುವುದು.

ನಾಗರಿಕರ ಹಕ್ಕುಗಳ ಬಗ್ಗೆ ನೀವು ಜಾಗರೂಕರಾಗಿರಬೇಕು. ಜೊತೆ ಜೊತೆಗೆ ನಿಮ್ಮ ಕರ್ತವ್ಯ ಪಾಲನೆ ಕಡೆ ಗಮನವಿರಬೇಕು ಹಕ್ಕು ಮತ್ತು ಕರ್ತವ್ಯ ಒಂದೇ ನಾಣ್ಯದ ಎರಡು ಮುಖಗಳು.

ಈ ಐತಿಹಾಸಿಕ ಕಾರ್ಯವನ್ನು, ಆಗಗೊಳಿಸಲು, ಸಂಕಲ್ಪಬದ್ಧರಾಗಿ ಮುನ್ನುಗ್ಗೋಣ. ಇಂದು ವಿಷಮಪರಿಸ್ಥಿತಿ ಇವರಿಸಿದೆ, ಇಂದಿನ ಕಗ್ಗತ್ತಲೆಯಿಂದ ಪುನಃ ಬೆಳಕಿನ ಕಡೆ ಕರೆದೊಯ್ಯುವ ಈ ನಮ್ಮ ನಿವೇದನೆ ವ್ಯರ್ಥವಾಗದು. ತನ್ನ ಮುಕ್ತಿಗಾಗಿ ನಡೆಯುವ ಈ ಹೋರಾಟದಲ್ಲಿ ಜನತೆ ಉತ್ಸಾಹ ಪೂರ್ವಕವಾಗಿ ಭಾಗವಹಿಸುವರೆಂಬ ವಿಶ್ವಾಸ ನಮಗಿದೆ. ★

– ಸರ್ವ ಸೇವಾ ಸಂಘ

ಕಣ್ಮರೆಯಾದ ಕರುಣಾಮಯಿ ಒಂದು ಪುಣ್ಯ ಸ್ಮರಣೆ

ಕೆಳೆದ ತಿಂಗಳು ೨೭ ರಂದು ನಂಜನಗೂಡಿನಲ್ಲಿ ಶ್ರೀ ಬಿ. ವಿ. ಬಾಲ ಸುಬ್ರಹ್ಮಣ್ಯಂ ತಮ್ಮ ೭೩ ನೇ ವಯಸ್ಸಿನಲ್ಲಿ ನಿಧನರಾದರು. ಶ್ರೀ ಬಾಲ ಸುಬ್ರಹ್ಮಣ್ಯಂ ನಂಜನಗೂಡಿನ ಸುಪ್ರಸಿದ್ಧ ಆಯುರ್ವೇದ ಸಂಸ್ಥೆಯಾದ ಸದ್ವೈದ್ಯ ಶಾಲೆಯ ಸಂಸ್ಥಾಪಕರಾಗಿದ್ದ ಬಿ.ವಿ. ಪಂಡಿತರ ಮಕ್ಕಳು. ಶ್ರೀ ಬಾಲಸುಬ್ರಮಣ್ಯಂ ೨೬ ವರ್ಷಗಳಷ್ಟು ದೀರ್ಘ ಕಾಲ ನಂಜನಗೂಡು ಪುರ ಸಭೆಯ ಸದಸ್ಯರಾಗಿ ದಾಖಲೆಯನ್ನೇ ಸೃಷ್ಟಿಸಿದರು ಮತ್ತು ಶ್ರೀ ನಂಜುಂಡೇಶ್ವರ ದೇವಸ್ಥಾನದ ಆಡಳಿತಗಾರರಾಗಿ ಶ್ರದ್ಧೆ ಮತ್ತು ಭಕ್ತಿಯಿಂದ ಸೇವೆ ಸಲ್ಲಿಸಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಅವರು ಮೈಸೂರು ವಿಭಾಗದ ಇಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಅವರ ನಡೆನುಡಿಗಳು ಮತ್ತು ರೀತಿ ನೀತಿಗಳು ಸರ್. ಎಂ. ವಿಶ್ವೇಶ್ವರಯ್ಯನವರ ನಡೆ–ನುಡಿ ಮತ್ತು ರೀತಿನೀತಿಗಳಂತೆಯೇ ಇದ್ದವು ಆದ್ದರಿಂದ ಅವರ ಇಂಜಿನಿಯರ್ ಮಿತ್ರರು ಅವರನ್ನು ವಿಶ್ವೇಶ್ವರಯ್ಯನವರೆಂದೇ ಕರೆಯಲು ಬಯಸಿದರು. ಬಾಲಸುಬ್ರಹ್ಮಣ್ಯಂ ಅವರ ವಿನಂತಿಯನ್ನು ಅಂಗೀಕರಿಸಿದರು. ಆ ರೀತಿ ಅವರು ಅಂಗೀಕರಿಸಿದ್ದು ಹಾಲಿನೊಂದಿಗೆ ಸಕ್ಕರೆ ಬೆರೆತಷ್ಟೇ ಸಹಜವಾಗಿತ್ತು. ಅವರು ಗಾಂಧೀಜಿಯವರ ವಿಚಾರದಲ್ಲಿ ಬಹಳ ಆಸಕ್ತಿ ಹೊಂದಿದ್ದರು. ಆದ್ದರಿಂದ ಮೈಸೂರು ಮತ್ತು ಮಂಡ್ಯ

೨೩ ನೇ ಪುಟಕ್ಕೆ

ದೂರದರ್ಶನವು ಪುಸ್ತಕದ ವಿರೋಧಿಯಲ್ಲ ಸ್ವತಃ ಜನರೇ ಪುಸ್ತಕದ ಬಗ್ಗೆ ನಿರಾಸಕ್ತರು!

ಕೆ. ಟಿ. ಗಟ್ಟಿ

ಬದುಕು ನಾನಾವಿಧದ ಅನುಭವಗಳನ್ನು ನೀಡಬಹುದು. ಸಾಧ್ಯವಿದ್ದರೆ, ದೇಶ ಸಂಚಾರ ಮತ್ತು ಲೋಕಸಂಚಾರ ಮಾಡಿ ಎಲ್ಲವನ್ನೂ ಕಣ್ಣಾರೆ ಕಾಣಬಹುದು. ಭೂಲೋಕದ ಏಳು ಅದ್ಭುತಗಳ ಬಗ್ಗೆ ಓದಿ ಎಷ್ಟು ತಿಳಿದುಕೊಂಡರೂ ಕಣ್ಣಾರೆ ಕಾಣುವುದಕ್ಕೆ ಸಮಾನವಾಗಲಾರದು. ಮೃಗ ಮತ್ತು ಪಕ್ಷಿಗಳನ್ನು, ನದಿ ಮತ್ತು ಸರೋವರಗಳನ್ನು ಕಣ್ಣಾರೆ ಕಾಣದೆ ಅವು ಹೇಗಿರುತ್ತವೆ ಎಂದು ತಿಳಿಯಲು ಸಾಧ್ಯವಿಲ್ಲ. ಚಿತ್ರಗಳು ಮತ್ತು ವಿವರಣೆಯಿಂದ ಕೆಲವು ಮಾಹಿತಿ ಸಿಗಬಹುದು. ಚಲನಚಿತ್ರದ ಮೂಲಕ ಇನ್ನೂ ಹೆಚ್ಚಿನ ವಿಚಾರಗಳನ್ನು ತಿಳಿದುಕೊಳ್ಳಬಹುದು. ಆದರೆ ನಿಜವಾದ ಅನುಭವಕ್ಕೆ ಇರುವಷ್ಟು ಆಯಾಮಗಳು ಕೇವಲ ದೃಶ್ಯ ಮತ್ತು ಶ್ರವಣ ಮಾಧ್ಯಮದಿಂದ ದೊರೆಯುವ ಅನುಭವಕ್ಕೆ ಇರುವುದಿಲ್ಲ. ಆದ್ದರಿಂದಲೇ ಚಿತ್ರದಲ್ಲಿ ನೋಡಿದ್ದು ಹೆಚ್ಚು ಕಾಲ ನೆನಪಿನಲ್ಲಿ ಉಳಿಯದಿರುವುದು; ನಿಜವಾಗಿ ಅನುಭವಿಸಿದ್ದು ನಮ್ಮ ವ್ಯಕ್ತಿತ್ವದ ಒಂದು ಅಂಶವೇ ಆಗಿ ಶಾಶ್ವತ ನೆನಪಿನಲ್ಲಿ ಉಳಿಯುವುದು.

ಆದರೆ ನೆನಪಿನಲ್ಲಿ ಉಳಿದದ್ದಷ್ಟೇ ಜ್ಞಾನವಲ್ಲ. ಕೇವಲ ಅನುಭವವೂ ಕೂಡ ಜ್ಞಾನವಾಗುದಿಲ್ಲ, ಕಂಡದ್ದು, ಕೇಳಿದ್ದು ಹಾಗೆಯೇ ಜ್ಞಾನವಾಗುವುದಿಲ್ಲ. ಮಾಹಿತಿ ಬೇರೆ, ಅರಿವು ಬೇರೆ. ಬಹಳ ಮಂದಿಯ ಜ್ಞಾನಾರ್ಜನೆ ಮಾಹಿತಿ ಸಂಗ್ರಹಕ್ಕೆ ಸೀಮಿತವಾಗಿರುತ್ತದೆ. ಮಾಹಿತಿಯನ್ನೆ ಜ್ಞಾನ ಎಂದು ತಪ್ಪು ತಿಳಿದುಕೊಳ್ಳುವವರೂ ಇದ್ದಾರೆ. ಕ್ವಿಜ್‌ನಲ್ಲಿ ಬಹುಮಾನಗಳಿಸಿದವನು ಜ್ಞಾನಿ ಎನಿಸುವುದಿಲ್ಲ. ಆದರೆ ಅವನ ನೆನಪಿನ ಶಕ್ತಿ ಚೆನ್ನಾಗಿರುತ್ತದೆ. ಬುದ್ಧಿ ಚುರುಕಾಗಿರುತ್ತದೆ. ಅದನ್ನು ಜ್ಞಾನಾರ್ಜನೆಗೆ ಉಪಯೋಗಿಸಿದರೆ ಜ್ಞಾನಿಯಾಗಲು ಸಾಧ್ಯ.

ಕಂಡದ್ದು, ಕೇಳಿದ್ದು, ಓದಿದ್ದು ಜ್ಞಾನವಾಗಬೇಕಾದರೆ, ಅದನ್ನು ಕುರಿತ ಯೋಚಿಸಬೇಕು. ಚಿಂತನ–ಮಂಥನ ನಡೆಸಬೇಕು. ಇದನ್ನು ಭಾಗಶಃ ಒಬ್ಬನೇ ಕುಳಿತು ಮಾಡಬಹುದು ಇಲ್ಲವೆ ಭಾಗಶಃ ಇತರರ ನೆರವಿನಿಂದ ಮಾಡಬಹುದು ಮತ್ತು ಭಾಗಶಃ ಪುಸ್ತಕಗಳ ಓದಿನ ಮೂಲಕ ಮಾಡಬಹುದು.

ಚಿಂತನೆ, ಚರ್ಚೆ, ಪರಾಮರ್ಶೆಗೆ ಇತರರ ನೆರವು ನಮಗೆ ಯಾವಾಗಲೂ

ದೊರೆಯುವುದಿಲ್ಲ. ಶಾಲೆ ಕಾಲೇಜುಗಳಲ್ಲಿ ಓದುವ ದಿನಗಳಲ್ಲಿ ಅಧ್ಯಾಪಕರ ನೆರವು ದೊರೆಯಬಹುದು. ಆದರೆ ಅಧ್ಯಾಪಕರನ್ನು ನಾವು ಸದಾಕಾಲ ನಮ್ಮ ಬಳಿಯಲ್ಲೇ ಇರಿಸಿಕೊಳ್ಳಲಾರೆವು. ಅಧ್ಯಾಪಕನಾದರೂ ಯಾರು? ಅಧ್ಯಾಪಕ ನಿಸರ್ಗ ಸೃಷ್ಟಿಯೇನಲ್ಲ. ಆತ ನೂರಾರು ಪುಸ್ತಕಗಳ ಸಾರವನ್ನು ಗ್ರಹಿಸಿ ಕೊಂಡು ಯಾವುದೋ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ನೈಪುಣ್ಯ ಸಾಧಿಸಿದ ವ್ಯಕ್ತಿ.

ವಿಶಾಲವಾದ ಜಗತ್ತಿನಲ್ಲಿ ಎರಡು ಬಗೆಯ ಅಧ್ಯಾಪಕರಿದ್ದಾರೆ. ಅಧ್ಯಾಪಕ ವೃತ್ತಿಗಾಗಿ ಜ್ಞಾನಸಂಗ್ರಹ ಮಾಡುವವರು, ಜ್ಞಾನ ಸಂಗ್ರಹ ಮಾಡಿದುದರಿಂದಾಗಿ ಅಧ್ಯಾಪಕರಾದವರು; ಮಾತ್ರವಲ್ಲ, ಅಧ್ಯಾಪಕರಿಗೂ ಗುರು ಗಳಾದವರು. ಈ ಎರಡನೆಯ ವರ್ಗದಲ್ಲಿ ಬುದ್ಧನೂ ಬರುತ್ತಾನೆ. ಅರಿಸ್ಟಾಟಲ್, ಷೇಕ್ಸ್‌ಪಿಯರ್, ಗಾಂಧಿ, ಟಾಗೋರ್, ವಿವೇಕಾನಂದ ಮುಂತಾದವರೆಲ್ಲ ಬರುತ್ತಾರೆ. ಅಧ್ಯಾಪಕ ವೃತ್ತಿಯಲ್ಲಿದ್ದೂ ನಿರಂತರವಾಗಿ ಇಂಥ ಗುರು ಗಳೊಂದಿಗೆ ಇರುವ ವಿದ್ಯಾರ್ಥಿಯೇ ನಿಜವಾದ ಅಧ್ಯಾಪಕ.

ಪುಸ್ತಕದ ಒಂದು ಮಹತ್ವದ ಅನುಕೂಲವೇನೆಂದರೆ, ಅದನ್ನು ಸದಾಕಾಲ ನಮ್ಮ ಜೊತೆಯಲ್ಲಿರಿಸಿಕೊಳ್ಳಬಹುದು. ನಾವು ಹೋಗುವಲ್ಲಿಗೆ ನಮ್ಮೊಂದಿಗೆ ಒಯ್ಯಬಹುದು. ಓದಿದ್ದನ್ನು ಮತ್ತೊಂದು ಬಾರಿ, ಬೇಕಾದಷ್ಟು ಬಾರಿ ಓದ ಬಹುದು. ಬೇಕಾದಲ್ಲಿ ತೆರೆದು, ಚಿಂತಿಸಿ, ವಿಮರ್ಶಿಸಿ, ಮನನ ಮಾಡಿಕೊಂಡು ಮತ್ತೆ ಮುಂದುವರಿಯಬಹುದು ಪ್ರಯಾಣಕಾಲದಲ್ಲಿ ಮಿತ್ರ-ಮಾರ್ಗದರ್ಶಕ-ದಾರ್ಶನಿಕ ಮತ್ತು ಸಂಗಾತಿಯಾಗಲು ಪುಸ್ತಕದಿಂದ ಮಾತ್ರ ಸಾಧ್ಯ.

ಪುಸ್ತಕವನ್ನು ಯಾವ ರೀತಿ ಬಳಸಲು ಸಾಧ್ಯವೋ ಆ ರೀತಿಯಲ್ಲಿ ರೇಡಿಯೋ, ಟೀವಿ, ಕಂಪ್ಯೂಟರ್ ಇತ್ಯಾದಿಗಳನ್ನು ಬಳಸಲು ಸಾಧ್ಯವಿಲ್ಲ. ಆದು ದರಿಂದ ಟೀವಿ, ಕಂಪ್ಯೂಟರ್ ಬಂದ ಮೇಲೆ ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗುತ್ತದೆ ಎಂಬ ತರ್ಕದಲ್ಲಿ ಹುರುಳಿಲ್ಲ. ಪುಸ್ತಕದಿಂದಾಗದ ಎಷ್ಟೋ ಅನುಕೂಲತೆ ಕಂಪ್ಯೂಟರ್ ಒದಗಿಸುತ್ತದೆ ಎಂಬುದೇನೋ ನಿಜ. ವಿಶ್ವಕೋಶ ಗಳು, ಶಬ್ದಕೋಶಗಳು, ಜ್ಞಾನ ವಿಜ್ಞಾನದ ನೂರಾರು ಆಕರಗ್ರಂಥಗಳು ಸಿ.ಡಿ. ಗಳಾಗಿ ಬದಲಾಗಬಹುದು. ಆದರೆ ಸಿ.ಡಿ.ಯಲ್ಲಿ ಷೇಕ್ಸ್‌ಪಿಯರನ ನಾಟಕಗಳ ಅಧ್ಯಯನ ನಡೆಸಲು ಸಾಧ್ಯವೆ? ಕವಿತೆಗಳನ್ನು ಆಸ್ವಾದಿಸಲು ಸಾಧ್ಯವೆ? ಕಾದಂಬರಿಗಳನ್ನು ಓದಲು ಸಾಧ್ಯವೆ? ಓದಿ ಓದಿ ನಿದ್ದೆ ಬಂದರೆ ಪುಸ್ತಕ ವನ್ನು ತಲೆದಿಂಬಿನಡಿಯಲ್ಲಿರಿಸಿ, ಎಚ್ಚರಾದಾಗ ಎದ್ದು ಓದಬಹುದು. ಒಂದು

ಶ್ರೇಷ್ಠವಾದ ಗ್ರಂಥ ಒಬ್ಬ ಆತ್ಮೀಯ ಸ್ನೇಹಿತ ಇದ್ದ ಹಾಗೆ. ತಂದೆಯ ಹಾಗೆ, ಗುರುವಿನ ಹಾಗೆ ಎಂದರೂ ತಪ್ಪಲ್ಲ. ಪುಸ್ತಕ ಎಷ್ಟು ಹಳೆಯದಾದರೂ ಆ ರೂಪದ ಆತ್ಮೀಯತೆ ಕುಂದುವುದಿಲ್ಲ ಪುಸ್ತಕವನ್ನು ಕೈಗೆತ್ತಿಕೊಂಡಾಗ, ಅದರ ಹಾಳೆಗಳನ್ನು ಒಂದೊಂದಾಗಿ ಮಗುಚುವಾಗ ಸಿಗುವ ಆನಂದ ಕಂಪ್ಯೂಟರಿನ ಮುಂದೆ ಕುಳಿತು ಗುಂಡಿಯನ್ನೊತ್ತಿದಾಗ ಸಿಗುವುದಿಲ್ಲ.

ಅನುಭವ ಮುಖ್ಯವೇನೋ ನಿಜ. ಆದರೆ ಎಲ್ಲರಿಗೂ ಎಲ್ಲಾ ಅನುಭವಗಳಾಗಲು ಸಾಧ್ಯವೆ? ನಮ್ಮ ನಮ್ಮ ಬದುಕಿನ ರೀತಿಯು ಮಿತಿ ಇರುತ್ತದಲ್ಲ? ಒಂದು ಪುಸ್ತಕವು ವರ್ಷಗಳ ಅನುಭವ, ಅಧ್ಯಯನ ಮತ್ತು ಚಿಂತನೆಯ ಉತ್ಪನ್ನವಾಗಿರುತ್ತದೆ. ಅದು ಪ್ರಯೋಗ, ಮರು ಪ್ರಯೋಗಗಳ ಫಲಿತಾಂಶದ ದಾಖಲೆಯಾಗಿರುತ್ತದೆ. ಅದರ ಕರ್ತೃ ಒಬ್ಬನೇ ವ್ಯಕ್ತಿಯಾಗಿದ್ದರೂ ಅದರ ಹಿಂದೆ ಹಲವು ವ್ಯಕ್ತಿಗಳು ಕಂಡ ಸತ್ಯದ ದರ್ಶನವಿರುತ್ತದೆ. ಭೂತಕಾಲವಿಲ್ಲದಿರುವುದು ಯಾವುದೂ ಇಲ್ಲ. ಪ್ರತಿ ಪುಸ್ತಕಕ್ಕೂ ಒಂದು ಭೂತಕಾಲವಿರುತ್ತದೆ. ಅದು ಹಲವು ಶತಮಾನಗಳಷ್ಟು ದೀರ್ಘವಾಗಿರಬಹುದು ಮತ್ತು ಭೂತಕಾಲದಷ್ಟೇ ಸಂಕೀರ್ಣವಾಗಿರಬಹುದು.

ಓದಿ ಏನಾಗಬೇಕು? ಓದದೇ ಬದುಕಲು ಸಾಧ್ಯವಿಲ್ಲವೆ ಎಂದು ಕೇಳುವವರಿದ್ದಾರೆ. ಪುಸ್ತಕ ಕೊಂಡುಕೊಳ್ಳುವುದು ವ್ಯರ್ಥ ಖರ್ಚು, ಓದುವ ಸಮಯವನ್ನು ಯಾವುದಾದರೂ ಉತ್ಪಾದನೆಯ ಕೆಲಸಕ್ಕೆ ಉಪಯೋಗಿಸುವುದು ಒಳ್ಳೆಯದು ಎನ್ನುವವರಿಲ್ಲದಿಲ್ಲ. ಒಂದಷ್ಟು ಹಣ ಮತ್ತು ಸಮಯವನ್ನು ಆಡಂಬರದ ಆಚರಣೆ ಉತ್ಸವಗಳಿಗೆ ವ್ಯಯಿಸುವವರೂ ಇದ್ದಾರೆ.

ದಿನಕ್ಕೆ ಸಾವಿರ ರೂಪಾಯಿಯವರೆಗೆ ಊಟ–ತಿಂಡಿ ತೀರ್ಥಕ್ಕೆ ಖರ್ಚು ಮಾಡುವವರಿದ್ದಾರೆ. ಕೇವಲ ಪಾನ್ ಬೀಡಕ್ಕೆ ದಿನಕ್ಕೆ ನೂರಿನ್ನೂರು ರೂಪಾಯಿ ಖರ್ಚು ಮಾಡುವವರಿದ್ದಾರೆ. ಅವರಲ್ಲಿ ಪುಸ್ತಕ ಪ್ರೀತಿಯಿಲ್ಲವಲ್ಲ ಎಂದು ಖೇದಿಸಬೇಕಾದ ಅಗತ್ಯವಿಲ್ಲ. ಆದರೆ ಅಂಥವರ ಮನೆಯಲ್ಲಿ ಶಾಲಾ ಕಾಲೇಜಿಗೆ ಹೋಗುವ ಹುಡುಗ ಹುಡುಗಿಯರಿರುತ್ತಾರೆ. ಇವರು ಸಮಾಜದ ಮುಖ್ಯ ಆಧಾರವಾದ ಡಾಕ್ಟರು, ಇಂಜಿನಿಯರು, ಅಧಿಕಾರಿ, ಅಧ್ಯಾಪಕ ಇತ್ಯಾದಿ ಆಗಲಿರುವವರು. ಇವರಿಗೆ ಕೇವಲ ಪಠ್ಯಪುಸ್ತಕವಲ್ಲದೆ ಇತರ ಪುಸ್ತಕಗಳನ್ನು ಓದುವ ಅಗತ್ಯ ಇಲ್ಲವೆ?

ಓದನ್ನು ವೃತ್ತಿಗೆ ಅಥವಾ ಉದ್ಯೋಗ ಪಡೆಯುವುದಕ್ಕೆ ತಳಕುಹಾಕಿ

ಕೊಂಡಂದಿನಿಂದ ಓದುವುದು ವಿದ್ಯಾರ್ಥಿಯಾದವನು ಮಾಡಬೇಕಾದ್ದು, ಇತರರಿಗೆ ಓದು ಅಗತ್ಯವೇನೂ ಇಲ್ಲ ಎಂಬ ಭಾವನೆ ಹುಟ್ಟಿಕೊಂಡಿರಬಹುದು. ಆದರೆ ಹೆಚ್ಚಿನ ವಿದ್ಯಾರ್ಥಿಗಳ ಓದಾದರೂ ಏನು? ಕೇವಲ ಪಠ್ಯಪುಸ್ತಕ, ನೋಟ್ಸ್ ಮತ್ತು ಗೈಡ್! ಇವರ ಪೈಕಿ ತಮ್ಮ ವ್ಯಾಸಂಗವನ್ನು ಬರೀ ನೋಟ್ಸ್ ಮತ್ತು ಗೈಡ್‌ಗಳಿಗೆ ಸೀಮಿತಗೊಳಿಸುವವರೂ ಇದ್ದಾರೆ.

ಕೇರಳದಲ್ಲಿ ರೈತರು, ಕಾರ್ಮಿಕರು, ದಿನಗೂಲಿಮಾಡುವವರೂ ಕೂಡ ಓದುತ್ತಾರೆ. ಕಟ್ಟಡದ ಕೆಲಸ, ಮರದ ಕೆಲಸ ಇತ್ಯಾದಿಗಳನ್ನು ಮಾಡುವ ಕುಶಲಕರ್ಮಿಗಳ ಪೈಕಿ ಪದವೀಧರರಿರುತ್ತಾರೆ. ಬಹುತೇಕ ಎಲ್ಲ ಶ್ರಮ ಜೀವಿಗಳೂ ದಿನದ ಕೆಲಸ ಮುಗಿದ ಬಳಿಕ ಪತ್ರಿಕೆಗಳನ್ನು, ಪುಸ್ತಕಗಳನ್ನು ಓದುತ್ತಾರೆ. ತಮ್ಮ ಭಾಷೆಯ ಪ್ರಸಿದ್ಧ ಕವಿಗಳ ಕಾವ್ಯದ ಸಾಲುಗಳನ್ನು ಉದ್ಧರಿಸಿ ಹೇಳಬಲ್ಲ ಕಾರ್ಮಿಕರನ್ನು ಕೇರಳದಲ್ಲಿ ಮಾತ್ರಕಾಣಲು ಸಾಧ್ಯ!

ಓದಿನಿಂದ ಏನು ಪ್ರಯೋಜನ ಎಂಬುದನ್ನು ಓದಿಯೇ ತಿಳಿದುಕೊಳ್ಳ ಬೇಕಲ್ಲದೇ, ಹೇಳಿ ತಿಳಿಸಲು ಸಾಧ್ಯವಿಲ್ಲ. ಒಂದು ಪುಸ್ತಕವನ್ನು ಓದಿದಾಗ ಆಗುವ ಆನಂದಕ್ಕೂ ಐವತ್ತು ಅಥವಾ ನೂರು ರೂಪಾಯಿಯ ಒಂದು ಪಾನ್ ಬೀಡಾ ತಿಂದಾಗ ಸಿಗುವ ಸುಖಕ್ಕೂ ಏನು ವ್ಯತ್ಯಾಸ ಎಂದು ತಿಳಿಯಬೇಕಾ ದರೆ, ಬೀಡಾವನ್ನು ಮಾತ್ರ ತಿಂದು ಪ್ರಶ್ನೆ ಕೇಳಿದರೆ, ತಿಳಿಯಲಿಕ್ಕಿಲ್ಲ, ಪುಸ್ತಕ ವನ್ನು ಕೂಡ ಓದಬೇಕಾಗುತ್ತದೆ. ಬಹುಶಃ ಕೊಂಡು ಓದಿದರೆ ಇನ್ನಷ್ಟು ಚೆನ್ನಾಗಿ ತಿಳಿಯಬಹುದು!

ಲಕ್ಷಗಟ್ಟಲೆ ಸಂಪಾದಿಸಿ, 'ಕೇವಲ ಸುಖ' ಅನುಭವಿಸುವುದೇ ಜೀವನ ಎಂದುಕೊಂಡಿರುವವರು ಓದದಿದ್ದರೆ ಬೇಡ. ಕುಡಿತ, ಸಿಗರೇಟು, ಗುಟ್ಕಾ, ಬೀಡಾ ವ್ಯಸನಿಗಳು ಕೂಡ ಓದಬೇಕೆಂದೆಲ್ಲ ಅವರು ಓದಿ ಏನಾಗಲಿಕ್ಕಿದೆ? ಇನ್ನು, ಶ್ರಮಿಕ ವರ್ಗದವರ ವಿಚಾರ. ಕರ್ನಾಟಕದಲ್ಲಿ ಶ್ರಮಿಕ ವರ್ಗದವರಲ್ಲಿ ಅಕ್ಷರ ಜ್ಞಾನವುಳ್ಳವರ ಸಂಖ್ಯೆಯೇ ತುಂಬಾ ಸಣ್ಣದು. ವಿದ್ಯಾವಂತರಂತೂ ಇಲ್ಲವೇ ಇಲ್ಲವೆನ್ನಬಹುದು. ಆದ್ದರಿಂದಲೇ ಒಂದು ಚಿಕ್ಕ ಪಟ್ಟಣದಲ್ಲಿ ಕೂಡ ಎಳೆಂಟು ಮದ್ಯದಂಗಡಿಗಳಿರುತ್ತವೆ. ದೊಡ್ಡ ಪಟ್ಟಣದಲ್ಲಿ ಕೂಡ ಪುಸ್ತಕ ದಂಗಡಿಯಿಲ್ಲ! ಶ್ರಮಿಕ ವರ್ಗದವರು ಪುಸ್ತಕದಂಗಡಿಗಳಲ್ಲಿ ಕಾಣಿಸುವ ದಿನ ಕರ್ನಾಟದಲ್ಲಿ ಎಂದಾದರೂ ಬಂದೀತೆ? ಅಂಥ ಕನ್ನಡ ನಾಡು ಎಂದು ಉದಯ ವಾದೀತೆಂದು ಯಾವುದೇ ಲೇಖಕ ಅಥವಾ ಜ್ಯೋತಿಷಿ ಹೇಳಬಲ್ಲನೆ?

ಅವರ ವಿಚಾರ ಅಂತಿರಲಿ; ವಿದ್ಯಾವಂತರ ಪೈಕಿ ಓದುವ ಅಭ್ಯಾಸ

ಎಷ್ಟು ಜನರಿಗಿದೆ? ಶಾಲೆ, ಕಾಲೇಜುಗಳ ಅಧ್ಯಾಪಕರ ಪೈಕಿ ಓದುವ ಹುಚ್ಚರು, ಅಧ್ಯಯನಶೀಲರು ಎಷ್ಟು ಮಂದಿಯಿದ್ದಾರೆ? ಬೇರೆ ವಿವಿಧ ಉದ್ಯೋಗಗಳಲ್ಲಿರುವವರ ಪೈಕಿ ನೂರರಲ್ಲಿ ತೊಂಬತ್ತೈದು ಮಂದಿಗೆ ಪುಸ್ತಕ ಅಥವಾ ಸಾಹಿತ್ಯದ ಗಂಧಗಾಳಿಯೂ ಇರುವುದಿಲ್ಲ. ಸಾಹಿತ್ಯ ಸಮ್ಮೇಳನದ ಪುಸ್ತಕದ ಮಳಿಗೆಗಳಲ್ಲಿ ಕಾಣಿಸುವವರು ಉಳಿದ ಶೇಕಡಾ ಐದು ಮಂದಿ! ಇವರಿಂದಾಗಿ ಮತ್ತು ಓದುವ ಅಭ್ಯಾಸವಿರುವ ಶೇಕಡಾ ಇಪ್ಪತ್ತು–ಮೂವತ್ತು ಮಂದಿ ಅಧ್ಯಾಪಕರಿಂದಾಗಿ ಮತ್ತು ಪತ್ಯಪುಸ್ತಕವಲ್ಲದ ಪುಸ್ತಕವನ್ನು ಕೂಡ ಓದಬೇಕಾದ ಅಗತ್ಯವಿದೆ ಎಂದು ತಿಳಿದಿರುವ ಶೇಕಡಾ ಐದು ಅಥವಾ ಹತ್ತು ಮಂದಿ ವಿದ್ಯಾರ್ಥಿಗಳಿಂದಾಗಿ, ಓದನ್ನು ಪ್ರೀತಿಸುವ ಶೇಕಡಾ ಐದು ಸಾರ್ವಜನಿಕರಿಂದಾಗಿ ನಮ್ಮ ಪುಸ್ತಕಗಳು, ಪತ್ರಿಕೆಗಳು ಉಳಿಯಬೇಕು! ಟೀವಿ ಪುಸ್ತಕದ ಶತ್ರುವಲ್ಲ. ಜನರೇ ಪುಸ್ತಕದ ನಿರಭಿಮಾನಿಗಳು!

ಓದುವ ಅಭ್ಯಾಸವುಳ್ಳ ಮನಸ್ಸು ಬೆಳೆಯುವ ವಿಧಾನವನ್ನು ಒಂದು ವೃಕ್ಷ ಬೆಳೆಯುವ ವಿಧಾನಕ್ಕೆ ಹೋಲಿಸಬಹುದು. ಓದಿನಿಂದಾದ ಮಾನಸಿಕ, ಬೌದ್ಧಿಕ ಪರಿವರ್ತನೆ ಒಂದು ದಿನದಲ್ಲಿ ಅಥವಾ ಒಂದು ನಿರ್ದಿಷ್ಟ ಅವಧಿಯಲ್ಲಿ ಕಾಣಿಸಲಾರದು. ಆದುದರಿಂದ ನನ್ನ ಪುಸ್ತಕವನ್ನೋದಿದ್ದರಿಂದಾದ ಪರಿಣಾಮ ನನಗೇನೂ ಕಾಣಿಸಲಿಲ್ಲ ಎಂದು ಒಬ್ಬ ಲೇಖಕ ಹೇಳಿದರೆ ಅದು ಅವನ ದೂರದರ್ಶಿತ್ವದ ಕೊರತೆ ಮಾತ್ರ ತೋರಿಸುತ್ತದೆ. ಒಂದು ತಲೆಮಾರಿನ ಓದುಗರ ಮೇಲೆ ಒಂದು ಕಾಲಘಟ್ಟದ ಸಾಹಿತ್ಯ ಏನು ಒಟ್ಟು ಪ್ರಭಾವ ಬೀರಿದೆ ಎಂದು ಗುರುತಿಸಬಹುದು. ಆದರಲ್ಲಿ ಯಾವುದೋ ಒಬ್ಬ ಲೇಖಕನ, ಯಾವುದೋ ಒಂದೆರಡು ಪುಸ್ತಕಗಳ ಪ್ರಭಾವವನ್ನು ಕಾಣಲು ಯತ್ನಿಸುವುದು ಸಾಧುವಾದ ವಿಚಾರವಲ್ಲ.

ಓದಿನಿಂದಾಗುವ ಪರಿವರ್ತನೆ ಹೊರಗೆ ಕಾಣಿಸುವಂಥದಲ್ಲ. ಯಾವುದೋ ಪುಸ್ತಕದ ಓದಿನಿಂದ ಪ್ರಭಾವಿತನಾಗಿ ಸತ್ಕಾರ್ಯ ವೆಸಗುವವರಿದ್ದಾರೆ. ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವವರಿದ್ದಾರೆ ಇವರ ಪೈಕಿ ಕೆಲವರು ಒಳ್ಳೆಯ ಆಡಳಿತಾಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು. ಆದರೆ ತನ್ನ ಮೇಲೆ ಇಂಥ ಪುಸ್ತಕ ಪ್ರಭಾವ ಬೀರಿತು ಎಂದು ಯಾರೂ ಹೇಳುವುದಿಲ್ಲ. ಯಾಕೆ ಹೇಳಬೇಕು? ತನ್ನ ಮೇಲೆ ಇಂಥ ಲೇಖಕ ಪ್ರಭಾವ ಬೀರಿದ ಎಂದು ಲೇಖಕನೇ ಹೇಳುವುದಿಲ್ಲ? ಯಾವುದೋ ಕಾದಂಬರಿಯಿಂದ ಅರ್ಧ ಮುಕ್ಕಾಲು ಕತೆ ಕದ್ದು ಸಿನಿಮಾ ಮಾಡಿದವನೇ ಸತ್ಯ ಹೇಳುವುದಿಲ್ಲ?

ಅದೆಲ್ಲ ಮುಖ್ಯವಲ್ಲ. ಮುಖ್ಯ ಏನು ಎಂದರೆ ಓದಿನ ಮೂಲಕ ಜನಸಮಷ್ಟಿಯೆಲ್ಲಾಗುವ ಒಟ್ಟು ಪರಿಣಾಮ ಏನು ಎಂಬುದು. ಕೇಳಬೇಕಾದ ಪ್ರಶ್ನೆಯೆಂದರೆ, ಜನರು ಹೆಚ್ಚು ಪ್ರಜ್ಞಾವಂತರಾಗುತ್ತಿದ್ದಾರೆಯೆ ಎಂಬುದು. ಓದು ನಮ್ಮನ್ನು ಹೆಚ್ಚು ಪ್ರಜ್ಞಾವಂತರನ್ನಾಗಿ ಹೆಚ್ಚು ಸಂವೇದನಾಶೀಲರನ್ನಾಗಿ ಮಾಡುತ್ತದೆ. ನಮ್ಮ ಅರಿವನ್ನು ಹೆಚ್ಚಿಸುತ್ತದೆ. ನಮ್ಮ ವಿವೇಚನಾಶಕ್ತಿಯನ್ನು ಹರಿತಗೊಳಿಸುತ್ತದೆ. ನಮ್ಮ ಆತ್ಮವಿಶ್ವಾಸ ಬೆಳೆಯುತ್ತದೆ. ನಮ್ಮ ನಿರ್ಧಾರಗಳಿಗೆ ನಮ್ಮಿಂದಲೇ ಮಾರ್ಗದರ್ಶನ ದೊರೆಯುತ್ತದೆ. ಆದುದರಿಂದ ಅದಕೋಸ್ಕರ ಇನ್ನೊಬ್ಬನನ್ನು ಆಶ್ರಯಿಸುವ ಅವನ ಪದತಲದಲ್ಲಿ ಬೀಳುವ ಅಗತ್ಯ ಉಂಟಾಗುವುದಿಲ್ಲ.

ಬದುಕು ಎಂಬುದಿರುವುದು ಆಹಾರ, ನಿದ್ರೆ ಮತ್ತು ಮೈಥುನ ಇವು ಮೂರರಲ್ಲಿ ಮಾತ್ರ ಎಂದಾದರೆ, ಅದರ ಮಟ್ಟ ಏರುವುದೇ ಬದುಕಿನ ಗುಣ ಮಟ್ಟದ ಏರುವಿಕೆ ಎಂದು ತಿಳಿಯಬೇಕಾಗುತ್ತದೆ. ಸಾಹಿತ್ಯ, ಸಂಸ್ಕೃತಿ ಇತ್ಯಾದಿಗಳ ಕುರಿತು ಯೋಚಿಸಬೇಕಾಗಿಯೇ ಇಲ್ಲ. ಹಾಗಾದರೆ, ಜೀವನ ಧರ್ಮವೂ ಅಷ್ಟೆ; ಕಾಡಿನದ್ದೂ ನಾಡಿನದ್ದೂ ಒಂದೇ ಆಗಿರುತ್ತದೆ. ★

(ವಿಜಯ ಕರ್ನಾಟಕ ಸಭಾರ)

೧೭ ನೇ ಪುಟದಿಂದ

ಜಿಲ್ಲೆಗಳಲ್ಲಿ ಯಾವುದೇ ಸರ್ವೋದಯ ವಿಚಾರದ ಕಾರ್ಯಕ್ರಮ ನಡೆದರೂ ಅದಕ್ಕೆ ಅವರು ಬೆಂಬಲವಾಗಿ ನಿಲ್ಲುತ್ತಿದ್ದರು. ಮತ್ತು ಪ್ರತಿ ವರ್ಷ ಪಶ್ಚಿಮ ವಾಹಿನಿಯಲ್ಲಿ ಸೆಪ್ಟಂಬರ್ ತಿಂಗಳಲ್ಲಿ ನಡೆಯುವ ಸರ್ವೋದಯ ಮೇಳದಲ್ಲಿ ತಪ್ಪದೇ ಭಾಗವಹಿಸುತ್ತಿದ್ದರು. ಸಜ್ಜನತೆ, ಸರಳತೆ, ಪ್ರಾಮಾಣಿಕತೆ, ನಿಸ್ವಾರ್ಥತೆ ಕರುಣೆ ಇತ್ಯಾದಿ ಎಲ್ಲಾ ದೈವೀಗುಣಗಳ ಸಾಕಾರ ಮೂರ್ತಿಯಾಗಿದ್ದ ಬಾಲ ಸುಬ್ರಮಣ್ಯಂ ಅವರಿಗೆ ಕನ್ನಡ ಜನತೆಯ ಆತ್ಮೀಯ ಶ್ರದ್ಧಾಂಜಲಿ ಅರ್ಪಿತ.

–ಸುರೇಂದ್ರ ಕೌಲಗಿ

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.

ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಕಾನೂನು ಸಾಕ್ಷರತಾ ಕಾರ್ಯಕ್ರಮ

(೨೦೦೧ನೇ ಸೆಪ್ಟಂಬರ್ ೯ರಂದು ಮೇಲುಕೋಟೆಯಲ್ಲಿ ಕರ್ನಾಟಕ ಕಾನೂನು ಪ್ರಾಧಿಕಾರದ ಆಶ್ರಯದಲ್ಲಿ ನಡೆದ ಕಾನೂನು ಸಾಕ್ಷರತಾ ವಿಚಾರ ಗೋಷ್ಠಿಯ ಉದ್ಘಾಟನಾ ಸಮಾರಂಭದಲ್ಲಿ ಮಂಡಿಸಲಾದ ವಿಚಾರಗಳು. – ಸುರೇಂದ್ರ ಕೌಲಗಿ)

ಈ ದಿನ ಸುದಿನ. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳು ನಮ್ಮ ಪುಟ್ಟ, ಆದರೆ, ವಿಶಿಷ್ಟವಾದ ಗ್ರಾಮಕ್ಕೆ ಬಂದು ಜನಸಾಮಾನ್ಯರಿಗೆ ತಮ್ಮ ದರ್ಶನವನ್ನು ಕೊಡುತ್ತಿರುವುದರ ಜೊತೆಗೆ ಕಾನೂನಿನ ಮಹತ್ವ, ಅದರ ವ್ಯಾಪ್ತಿ, ಅದರ ಆಯಾಮ, ಅದರ ಜವಾಬ್ದಾರಿ ಹಾಗೂ ಕಾನೂನುಗಳ ನಿರ್ವಹಣೆಯಲ್ಲಿ ಜನಸಾಮಾನ್ಯರ ಪಾತ್ರ ಮತ್ತು ಇವುಗಳನ್ನು ಜಾರಿಗೆ ತರುವ ಕಾರ್ಯಾಂಗದ ಹೊಣೆ ಇತ್ಯಾದಿ ಹಲವಾರು ವಿಷಯಗಳನ್ನು ತಿಳಿಸಲು ರಾಜಧಾನಿ ಬೆಂಗಳೂರಿನಿಂದ ದೂರದ ಈ ಸ್ಥಳಕ್ಕೆ ಬಂದಿರುವುದು ನಮ್ಮೆಲ್ಲರಿಗೆ ವಿಶೇಷ ಸಂತೋಷದ ದಿನವಾಗಿದೆ; ನಿತ್ಯ ಉತ್ಸವಗಳ ತಾಣವಾದಈ ಗ್ರಾಮಕ್ಕೆ ಇಂದಿನ ಈ ಸಭೆ ಹೆಚ್ಚಿನ ಅಂದವನ್ನೂ, ಹೆಚ್ಚಿನ ಗಾಂಭೀರ್ಯವನ್ನೂ ತಂದಿದೆ.

ನಮ್ಮದು ಪ್ರಜಾಪ್ರಭುತ್ವ ದೇಶ. ಪ್ರಜಾಪ್ರಭುತ್ವದ ದೇಶವೆಂದಾಗ ಸಹಜವಾಗಿ ಮತ್ತು ಸಾಮಾನ್ಯವಾಗಿ ಈ ಪ್ರಭುತ್ವದಲ್ಲಿ ಪ್ರಜೆಗಳ ಅಭಿಪ್ರಾಯ, ಅಧಿಕಾರ ಮತ್ತು ಹೊಣೆಯೇ ಪರಮೋಚ್ಚವೆಂಬ ವಿಚಾರ ಬರುತ್ತದೆ. ಇದು ಮೂಲಭೂತವಾಗಿ ಸತ್ಯವೂ ಹೌದು. ಆದರೆ ಪ್ರಜೆಗಳ ಸಾರ್ವಭೌಮ ಪ್ರಭುತ್ವದ ಅನುಷ್ಠಾನಕ್ಕೆ ವ್ಯವಹಾರಿಕವಾದ ಮಾರ್ಗ, ನ್ಯಾಯೋಚಿತವಾದ ಮಾಧ್ಯಮ ಇತ್ಯಾದಿಗಳು ಬೇಕಾಗುತ್ತವೆ. ಅಂಥ ಮಾರ್ಗ ಮತ್ತು ಮಾಧ್ಯಮಗಳಲ್ಲಿ ಪ್ರಧಾನವಾದುದು ನ್ಯಾಯಾಂಗ; ಉಳಿದವುಗಳು ಶಾಸಕಾಂಗ, ಕಾರ್ಯಾಂಗ ಮತ್ತು ಇತ್ತೀಚಿನ ವರ್ಷಗಳಲ್ಲಿ ಸೇರಿ ಕೊಂಡಿರುವ ಸ್ವತಂತ್ರ ಪ್ರತಿಕೋದ್ಯಮ ಈ ನಾಲ್ಕೂ ಸ್ತಂಭಗಳು ಪ್ರಜೆಗಳ ಪ್ರಭುತ್ವದ ನೈಜ ಆಚರಣೆಗೆ ಆಧಾರವಾಗಿವೆ. ಇವುಗಳಲ್ಲಿ ಯಾವ ಒಂದು ಅಂಗವೂ ಸರಿಯಾಗಿ ತನ್ನ ಪಾತ್ರವನ್ನು ನಿರ್ವಹಿಸದಿದ್ದರೆ ಅಷ್ಟರ ಮಟ್ಟಿಗೆ ಪ್ರಜೆಗಳ ಪ್ರಭುತ್ವ ಕುಂಠಿತಗೊಳ್ಳುತ್ತದೆ. ಆರೋಗ್ಯಕರವಾದ, ಪರಿವರ್ತನಶೀಲವಾದ, ಪ್ರಸ್ತುತವಾದ ಅರ್ಥಪೂರ್ಣ ಪ್ರಜೆಗಳ ಪ್ರಭುತ್ವಕ್ಕಾಗಿ ಈ ನಾಲ್ಕೂ ವಿಭಾಗಗಳು ಸಮನ್ವಯವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅಂಥ ಒಂದು ಪ್ರಮುಖ ವಿಭಾಗವಾದ ನ್ಯಾಯಾಂಗದ ಹಾಗೂ ಕಾನೂನುಗಳ ಪೋಷಕರಾದ ಗೌರವಾನ್ವಿತ ನ್ಯಾಯಮೂರ್ತಿ

ಗಳು ಸ್ವತಃ ಇಲ್ಲಿಗೆ ಪಾದಬೆಳೆಸಿರುವುದು ಪ್ರಜಾಪ್ರಭುತ್ವದ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

ಗೌರವಾನ್ವಿತರೇ, ನಾಗರೀಕರು ಕಾನೂನುಗಳನ್ನು ಗೌರವಿಸುತ್ತಾರೆ, ಅವುಗಳ ಬಗ್ಗೆ ಭಯ-ಭಕ್ತಿಗಳನ್ನಿಟ್ಟುಕೊಂಡಿದ್ದಾರೆ. ಕಾನೂನುಗಳ ರಚನೆಯ ಹಿಂದೆ ಇರುವ ಸದುದ್ದೇಶ್ಯಗಳ ಬಗ್ಗೆ ಪ್ರಶ್ನಾತೀತವಾದ ನಿಷ್ಠೆಯನ್ನು ಹೊಂದಿದ್ದಾರೆ. ಆದ್ದರಿಂದ ಸಹಜವಾಗಿಯೇ ಕಾನೂನುಗಳ ಕುರಿತು ನ್ಯಾಯಾಂಗ ಪೀಠಗಳಿಂದ ಆದೇಶಿಸಲ್ಪಡುವ ತೀರ್ಮಾನಗಳ ಬಗ್ಗೆ ಉನ್ನತಮಟ್ಟದ ಗುಣ ಮೌಲ್ಯಗಳನ್ನು ನಿರೀಕ್ಷಿಸುತ್ತಾರೆ. ನ್ಯಾಯಾಧೀಶರನ್ನು ಸಾಕ್ಷಾತ್ ದೇವರೆಂದೇ ಭಾವಿಸುತ್ತಾರೆ.

ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗವು ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡಿದೆ; ಆ ಬಗ್ಗೆ ಜನಸಾಮಾನ್ಯರಲ್ಲಿ ಹರ್ಷವನ್ನ ತಂದಿದೆ ಮತ್ತು ನ್ಯಾಯಾಂಗದ ಬಗ್ಗ ಗೌರವ ಹೆಚ್ಚಿದೆ.

ನಮ್ಮ ದೇಶದಲ್ಲಿ ಇನ್ನೂ ಶೇಕಡಾ ೫೦ ಕ್ಕಿಂತಲೂ ಹೆಚ್ಚು ನಿರಕ್ಷರತೆ ಮತ್ತು ಅಪೂರ್ಣ ಸಾಕ್ಷರತೆ ಇರುವುದರಿಂದ ಕಾನೂನುಗಳ ಪರಿಚಯ ಮತ್ತು ಜನಹಿತಕ್ಕಾಗಿ ಕಾನೂನುಗಳ ಉಪಯೋಗ ಹೇಗೆ ಇತ್ಯಾದಿ ವಿಷಯಗಳನ್ನು ತಿಳಿಸುವುದು ಇಂದಿನ ಕಾಲದಲ್ಲಿ ಮಹತ್ವದ ಕೆಲಸವಾಗಿದೆ. ಅಂಥ ಒಂದು ಉದ್ದೇಶ್ಯದ ಈಡೇರಿಕೆಗಾಗಿ ತಾವುಗಳು ಇಲ್ಲಿಗೆ ಬಂದಿರುವುದು ಔಚಿತ್ಯಪೂರ್ಣವಾಗಿಯೇ ಇದೆ. ಅದಕ್ಕಾಗಿ ನಾವೆಲ್ಲರೂ ತಮ್ಮಗಳಿಗೆ ಕೃತಜ್ಞರಾಗಿದ್ದೇವೆ.

ಜನಸಾಮಾನ್ಯರಲ್ಲಿ ನ್ಯಾಯಾಂಗದ ಬಗ್ಗೆ ಇರುವ ಸಾಮಾನ್ಯ ದೂರು ಏನೆಂದರೆ ನ್ಯಾಯ ವಿತರಣೆಯಲ್ಲಿ ಬಹು ವಿಳಂಬವಾಗುತ್ತದೆಂಬುದು. ಈ ವಿಳಂಬಕ್ಕೆ ನ್ಯಾಯಾಂಗವೊಂದೇ ಕಾರಣವಲ್ಲದೇ ಇರಬಹುದು: ಇತರ ಅಂಗಗಳಾದ ಕಾರ್ಯಾಂಗ ಮತ್ತು ಶಾಸಕಾಂಗಗಳೂ ಪರೋಕ್ಷವಾಗಿ ಕಾರಣವಿರಬಹುದು. ಆದರೂ ಕೂಡ ಈ ವಿಷಯವಾಗಿ ನೇರವಾದ ಟೀಕೆಗೆ ಗುರಿಯಾಗುತ್ತಿರುವುದು ನ್ಯಾಯಾಂಗವೇ. ಎಲ್ಲರಿಗೂ ತಿಳಿದಿರುವಂತೆ ಮತ್ತು ಅನುಭವವಾಗಿರುವಂತೆ "ನಿಧಾನಗತಿಯ ನ್ಯಾಯವಿತರಣೆ ನ್ಯಾಯ ವಂಚನೆಯೇ" ಆಗುತ್ತದೆ. ಇತ್ತೀಚಿನ ಒಂದು ಅಧಿಕೃತ ಹೇಳಿಕೆಯ ಪ್ರಕಾರ ದೇಶದ ಪರಮೋಚ್ಚ ನ್ಯಾಯಾಲಯದಲ್ಲಿ ಹತ್ತು ವರ್ಷಗಳಿಗೂ ಮೀರಿದ ೬.೪೫ ಪ್ರಕರಣಗಳಿವೆ ಮತ್ತು ಎರಡು ವರ್ಷಗಳಿಗೂ ಮೀರಿದ ೮,೭೭೨ ಪ್ರಕರಣಗಳಿವೆ.; ಆದೇ ರೀತಿ ರಾಜ್ಯಗಳಲ್ಲಿರುವ ಉಚ್ಚ ನ್ಯಾಯಾಲಯಗಳಲ್ಲಿ ೧೦ ವರ್ಷದ ಅವಧಿಯನ್ನು ಮೀರಿದ ಲಕ್ಷ ಪ್ರಕರಣಗಳಿವೆ: ಎರಡು ವರ್ಷದ ಅವಧಿಯನ್ನು ಮೀರಿದ

೧೮ ಲಕ್ಷ ಪ್ರಕರಣಗಳಿವೆ; ಅದೇ ರೀತಿ ಉಪ-ನ್ಯಾಯಾಲಯಗಳಲ್ಲಿ ೨ ಕೋಟಿ ಪ್ರಕರಣಗಳು ತೀರ್ಮಾನಕ್ಕಾಗಿ ಕಾಯುತ್ತಿವೆ. ಇಷ್ಟು ಅಗಾಧ ಪ್ರಮಾಣದ ಪ್ರಕರಣಗಳ ಹಿಂದೆ ಇರುವ ಮಾನವೀಯ ಕಷ್ಟ-ನಷ್ಟ-ನೋವುಗಳನ್ನು ಗಮನಿಸಿದರೆ ಎಂಥ ನಿಷ್ಕರುಣಿಯ ಎದೆಯೂ ಒಡೆಯುತ್ತದೆ. ಇಂಥ ಭೀಕರವಾದ ಪರಿಸ್ಥಿತಿಗೆ ಯಾರೊಬ್ಬರನ್ನೂ, ಯಾವೊಂದು ಅಂಗವನ್ನೂ ದೂಷಿಸುವಂತಿಲ್ಲ. ಇದಕ್ಕೆ ಪ್ರಜಾಪ್ರಭುತ್ವದ ಎಲ್ಲ ಅಂಗಗಳೂ ಕಾರಣವಾಗಿವೆ. ಅಲ್ಲದೆ, ನಮ್ಮ ಪ್ರಜಾಪ್ರಭುತ್ವದ ಆಡಳಿತ ಯಂತ್ರ ಎಷ್ಟು ದೋಷಪೂರ್ಣ ಎಂಬುದನ್ನು ಸಹ ಇದು ತೋರಿಸುತ್ತದೆ. ಮತ್ತು ನಾವು ಒಂದು ದೇಶವಾಗಿ ಇನ್ನೂ ಎಷ್ಟು ಸುಧಾರಣೆ ಮಾಡಿಕೊಳ್ಳಬೇಕಾಗಿದೆ, ಎಷ್ಟು ದಕ್ಷತೆ, ಪ್ರಾಮಾಣಿಕತೆ ಬೆಳೆಸಿಕೊಳ್ಳಬೇಕಾಗಿದೆ ಎಂಬುದನ್ನು ತೋರಿಸುತ್ತದೆ. ನಮ್ಮ ದೇಶದ ಪರಮೋಚ್ಚ ನ್ಯಾಯಾಲಯಕ್ಕೆ ಐವತ್ತು ವರ್ಷಗಳ ಚಿನ್ನದ ಹಬ್ಬ ಆಚರಿಸಿದ ಸಂತೋಷ ಇದೆ. ಆದರೆ ಮುಂದಿನ ವರ್ಷಗಳಲ್ಲಿ ನ್ಯಾಯಾಂಗದ ಬೆಳವಣಿಗೆ ಹೇಗೆ, ಇತ್ಯಾದಿ ಕುರಿತಾದ ಮುನ್ನೋಟದ ಬಗ್ಗೆ ಅದು ಬೆಳಕನ್ನು ಚೆಲ್ಲದೇ ಇರುವುದು ನಿರಾಶಾದಾಯಕ ಸಂಗತಿಯಾಗಿದೆ. ನ್ಯಾಯಾಂಗದಲ್ಲಿ ಸುಧಾರಣೆಯಾವಾಗಬೇಕಾದರೆ ಅದರ ಮಹತ್ವದ ಪಾತ್ರಧಾರಿಗಳು ನ್ಯಾಯಾಧೀಶರು ಮತ್ತು ನ್ಯಾಯವಾದಿಗಳೇ ಆಗಿರುವಾಗ ಅವರಿಂದಲೇ ಸುಧಾರಣಾ ಆಂದೋಲನ ನಡೆಯಬೇಕಿದೆ. ಅಂಥ ಆಂದೋಲನಕ್ಕೆ ಯಶಸ್ಸು ದೊರೆಯಬೇಕಾದುದು ಪ್ರಜಾಪ್ರಭುತ್ವಕ್ಕೆ ಬಹಳ ಅಗತ್ಯ. ಆದರ ಯಶಸ್ಸಿಗಾಗಿ ನಾವೆಲ್ಲ ಪ್ರಜೆಗಳು ಹೃದಯ ಪೂರ್ವಕವಾಗಿ ಸಹಕರಿಸೋಣ.

ಇತ್ತೀಚೆಗೆ ನ್ಯಾಯಾಂಗ ಕ್ಷೇತ್ರದಲ್ಲಿಯ ಇನ್ನೊಂದು ಮಹತ್ವಪೂರ್ಣ ಬೆಳವಣಿಗೆಯೊಂದು ನಮ್ಮ ದೇಶದ ಜನಜೀವನದಲ್ಲಿ ಮೇಲೆ ಪ್ರಭಾವ ಬೀರುತ್ತಿದೆ. ಅದುವೆ ನ್ಯಾಯಾಂಗ ನಿಂದನೆ ಎಂಬ ವಿಷಯ. ಇದು ಬಹಳ ಸೂಕ್ಷ್ಮವಾದ ಸಂಗತಿಯಾಗಿದೆ. ನಾಗರಿಕ ಸ್ವಾತಂತ್ರ್ಯದ ಎಲ್ಲೆ ಎಲ್ಲಿಯವರೆಗೆ, ನ್ಯಾಯಾಂಗದ ಪ್ರವೇಶ ಎಲ್ಲಿಯವರೆಗೆ ಎಂಬುದು ನಿಷ್ಕರ್ಷವಾಗಬೇಕಿದೆ ಈ ವಿಷಯವಾಗಿ ಆರೋಗ್ಯಪೂರ್ಣ ಹಾಗೂ ಪೂರ್ವಗ್ರಹ ಪೀಡಿತವಲ್ಲದ ಮನಸ್ಸಿನಿಂದ ಮುಕ್ತ ವಾತಾವರಣದಲ್ಲಿ ಸಂವಾದ ನಡೆಯಬೇಕಿದೆ. ನ್ಯಾಯಾಂಗ ನಿಂದನೆಯ ವಿಷಯವಾಗಿ ಹಿರಿಯ ನ್ಯಾಯಧೀಶ ಲಾರ್ಡ್ ಡೆನ್ನಿಂಗ್ ಹೀಗೆ ಹೇಳಿದ್ದಾರೆ, "ನಾವು ಟೀಕೆಗಳಿಗೆ ಹೆದರುವುದಿಲ್ಲ; ನಾವು ಅವುಗಳ ಬಗ್ಗೆ ರೋಷಗೊಳ್ಳುವುದೂ ಇಲ್ಲ. ಸಂಸತ್ತಿನಲ್ಲಿರಬಹುದು ಅಥವಾ ಹೊರಗಿರಬಹುದು, ಪತ್ರಿಕೆಯಲ್ಲಿರಬಹುದು, ಅಥವಾ ಆಕಾಶವಾಣಿಯಲ್ಲಿರಬಹುದು ಪ್ರತಿಯೊಬ್ಬ ವ್ಯಕ್ತಿಗೆ ಸಾರ್ವಜನಿಕ ಹಿತಾಸಕ್ತಿ ಕುರಿತುಕನ್ಯಾಯೋಚಿತವಾದ ಮತ್ತು ದಾಕ್ಷಿಣ್ಯರಹಿತ ಟಿಪ್ಪಣಿ ಮಾಡುವ

ಅಧಿಕಾರವಿದೆ" ಎಂದು ಹೇಳಿರುವ ಮಾತುಗಳು ನಮ್ಮೆಲ್ಲರಿಗೆ ಮಾರ್ಗದರ್ಶಕವಾಗಬಹುದು. ಇತ್ತೀಚಿಗಿನ ಅರುಂಧತಿರಾಯ್ ಸಂಬಂಧದಲ್ಲಿ ಪರಮೋಚ್ಚ ನ್ಯಾಯಾಲಯವು "ನ್ಯಾಯಾಲಯ ನಿಂದನೆ" ಕುರಿತು ಪಟ್ಟಿರುವ ಅಭಿಪ್ರಾಯವನ್ನು ವನ್ನು ಈ ಸಂಬಂಧದಲ್ಲಿ ಜ್ಞಾಪಿಸಿಕೊಳ್ಳಬಹುದಾಗಿದೆ. ಅಲೆಕ್ಸಾಂಡರ್ ಹೆಮಿಲ್ಟನ್ ಹೇಳಿದಾರೆ, "ನ್ಯಾಯಾಧೀಶರು ಸಂವಿಧಾನದ ಪೋಷಕರು."

ಇಂಥ ಎಲ್ಲ ವಿಚಾರ ಮಂಥನಗಳ ಪರಿಣಾಮವಾಗಿ ನಮ್ಮ ನ್ಯಾಯಾಂಗವು ಪುಟಕ್ಕಿಟ್ಟಿರುವ ಚಿನ್ನದಂತೆ, ಅಗ್ನಿ ಪರೀಕ್ಷೆಯಿಂದ ತೇಜೋವಂತೆಯಾಗಿ ಹೊರಬಂದ ಬಂದ ಸೀತೆಯಂತೆ, ಹಾಲಾಹಲ ಕುಡಿದೂ ಹಸನ್ಮುಖಿಯಾಗಿ ಕಂಗೊಳಿಸುವ ವಿಷಕಂಠನಂತೆ ಹೊರಹೊಮ್ಮಿ ಪ್ರಜೆಗಳ ನಮ್ಮ ಪ್ರಭುತ್ವವನ್ನು ರಾಜಮಾರ್ಗದಲ್ಲಿ ನಡೆಸಿಕೊಂಡು ಹೋಗುವ ಸಾಮರ್ಥ್ಯ ಪಡೆಯಲೆಂದು ನಾವೆಲ್ಲರೂ ಈ ಯದುಶೈಲದಲ್ಲಿ ಪ್ರತಿಷ್ಠಿತರಾಗಿರುವ ಶ್ರೀ ಯೋಗಾನರಸಿಂಹಸ್ವಾಮಿಯವರನ್ನೂ, ಶ್ರೀ ನಾರಾಯಣಸ್ವಾಮಿಯವರನ್ನೂ, ಶ್ರೀಮತಿ ಯದುಗಿರಿಯಮ್ಮನವರನ್ನೂ ಭಕ್ತಿಯಿಂದ ಪ್ರಾರ್ಥಿಸೋಣ.

ಈ ಕೆಲವು ವಿಚಾರಗಳನ್ನು ಘನತೆವೇತ್ತ ಈ ಸಭೆಯಲ್ಲಿ ಮಂಡಿಸಲು ಅವಕಾಶಕೊಟ್ಟ ತಮ್ಮೆಲ್ಲರಿಗೆ ನಾನು ಆಭಾರಿಯಾಗಿದ್ದೇನೆ. ★

ಜೈ ಹಿಂದ್, ಜೈ ಜಗತ್

—ಸುರೇಂದ್ರ ಕೌಲಗಿ

ಮೃತ್ಯುವಿನೊಂದಿಗೆ ಮುಖಾಮುಖಿ ೮ ನೇ ಪುಟದಿಂದ

ಯಿತು, ಗಿರಿಜಾರವರನ್ನು ನನ್ನ ಬಳಿಗೆ ಕರೆಸಬೇಕೆಂದು ಅಲ್ಲಿಯ ಸಿಬ್ಬಂದಿಯನ್ನು ಕೇಳಿಕೊಂಡಾಗ ಅವರು ಇದು ತೀವ್ರ ಉಪಚಾರದ ಕೊಠಡಿ, ಬೇರೆ ಯಾರೂ ಬರುವುದಕ್ಕೆ ಅವಕಾಶವಿಲ್ಲವೆಂದು ಹೇಳಿದಾಗ ನಾನು ಬಹಳ ನಿಃಸಹಾಯಕನಾದೆ ಆದರೂ ಕೂಡ ಅವರನ್ನು ಪದೇ ಪದೇ ಒತ್ತಾಯಿಸುತ್ತಲೇ ಇದ್ದೆ, ಅವರನ್ನು ಅನೇಕ ಬಗೆಯಾಗಿ ಬಹಳ ದೀನನಾಗಿ ವಿನಂತಿಸುತ್ತಲೇ ಇದ್ದೆ. ಗಿರಿಜಾ ಅವರು ನನ್ನಿಂದ ಒಂದು ನಿಮಿಷ ದೂರಾಗಿದ್ದರೂ ನನಗೆ ಸಹಿಸಲು ಆಗುತ್ತಿರಲಿಲ್ಲ. ಅಷ್ಟೊಂದು ತಳಮಳ ಹೃದಯದಲ್ಲಿತ್ತು. ವಾರ್ಡಿನಲ್ಲಿದ್ದ ನನ್ನ ಮಕ್ಕಳ ವಯಸ್ಸಿನ ಹುಡುಗರು ಓಡಾಡಿದರೆ ಅವರನ್ನೇ ನೋಡುತ್ತ ಇವರೇ ನನ್ನ ಮಕ್ಕಳಾಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅನಿಸುತ್ತಿತ್ತು. ಅಲ್ಲಿದ್ದ ವಾರ್ಡ್‌ಬಾಯ್‌ಗಳೇ ನನ್ನ ಹತ್ತಿರದ ಬಾಂಧವರಾಗಿ ಕಂಡರು. ಮುಳುಗುವ ಮನುಷ್ಯನಿಗೆ ಒಂದು ಹುಲ್ಲುಕಡ್ಡಿಯೇ ದೊಡ್ಡ ಆಶ್ರಯದ ವಸ್ತುವಾಗಿ ಕಾಣುವಂತೆ ವಾರ್ಡಿನಲ್ಲಿಯ ಜನರು ಕಂಡರು. ಅಂತೂ ಕೊನೆಗೂ ಬಹಳ ಒತ್ತಾಯ ಮಾಡಿ ನನ್ನನ್ನು ಸ್ಪೆಷಲ್ ವಾರ್ಡಿಗೆ ವರ್ಗಾಯಿಸಿಕೊಂಡೆ. ಅಲ್ಲಿಗೆ ಹೋದ ಮೇಲೆ ಸ್ವಲ್ಪ ಸಮಾಧಾನ ಉಂಟಾಯಿತು. ನನ್ನ ಮನೆಯವರು ಸದಾ ನನ್ನ ಹತ್ತಿರದಲ್ಲಿಯೇ ಇರಲು ಸಾಧ್ಯವಾಯಿತು. ಇಷ್ಟ ಮಿತ್ರರು ಭೇಟಿ ಮಾಡಲು ಬರತೊಡಗಿದ್ದರಿಂದ ಹೆಚ್ಚಿನ ಸಮಾಧಾನ ಉಂಟಾಯಿತು. ನಾನು ಬಹಳ ಹೆದರಿ ಆಯಾಸಗೊಂಡು ಮಲಗಿದ್ದಾಗ ನನ್ನ ಅಣ್ಣನಂತಿರುವ ಪ್ರೊ॥ ಬಿ.ಆರ್. ಪ್ರಾಣೇಶರಾವ್ ಬಂದು ನನಗೆ ಬಹಳಷ್ಟು ಧೈರ್ಯ ಹೇಳಿದರು. ಪ್ರಾಣೇಶರಾವ್ ಗಾಂಧೀ ವಿಚಾರವನ್ನು ಮತ್ತು ಸ್ವಾತಂತ್ರ್ಯದ ಚಳುವಳಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡಂಥವರು. ಮತ್ತು ಆ ಕುರಿತು ಮನ ಒಪ್ಪುವಂತೆ ಮಾತನಾಡಬಲ್ಲರು. ಅವರು ನನ್ನ ಹೆದರಿಕೆಯ ಮನೋಸ್ಥಿತಿಯನ್ನು ಅರಿತು ಕೂಡಲೇ ನನಗೆ ಅನೇಕ ಧೈರ್ಯದ ಮಾತುಗಳನ್ನು ಹೇಳಿದರಲ್ಲದೆ ತಾವು ಸ್ವತಃ ಅನುಭವಿಸಿದ ಆಸ್ಪತ್ರೆಯ ವಿವಿಧ ಅನುಭವಗಳನ್ನು ಬಹಳ ಸ್ವಾರಸ್ಯವಾಗಿ ಹೇಳುತ್ತಾ ಬಂದರು. ದಿನಾಲು ತಪ್ಪದೆ ೪ ಗಂಟೆಗೆ ಬಂದು ವಿವಿಧ ಆಸಕ್ತಿದಾಯಕ ವಿಷಯಗಳನ್ನು ತಿಳಿಸುತ್ತಿದ್ದರು. ಆಸ್ಪತ್ರೆಯ ಚಿಕಿತ್ಸೆಯಿಂದ ನನ್ನ ದೈಹಿಕ ಆರೋಗ್ಯ ಗುಣ ಹೊಂದುತ್ತಾ ಹೋದರೆ ಪ್ರಾಣೇಶರಾವ್ ಅವರ ಧೈರ್ಯದ ಮಾತುಗಳು ನನ್ನ ಮನೋ ಆರೋಗ್ಯವನ್ನು ಸುಧಾರಿಸುತ್ತಾ ಬಂತು. ಅದೇ ರೀತಿ ಇನ್ನೋರ್ವ ಆತ್ಮೀಯ ಸ್ನೇಹಿತರಾದ ಶ್ರೀ ಕೆ. ಎಂ. ನಾಗರಾಜರಾವ್ ಅವರು ದಿನಾಲು ಬಹಳ ಪ್ರೀತಿಯಿಂದ ಕಾಫಿ ತಂದು ಕೊಡುತ್ತಿದ್ದರು ಮತ್ತು

ಜೊತೆಗೆ ಆತ್ಮೀಯ ಮಾತುಗಳನ್ನೂ ಹೇಳುತ್ತಿದ್ದರು. ಶ್ರೀ ನಾಗರಾಜರಾವ್ ಕೆಲವಾರು ವರ್ಷ ಅಮೆರಿಕೆಯಲ್ಲಿದ್ದವರು, ಮುಂಬೈ ಮಹಾ ನಗರದಲ್ಲಿದ್ದವರು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಮುಂಬೈಯಲ್ಲಿದ್ದುದರಿಂದ ಅಂದಿನ ಅನೇಕ ಸ್ವಾರಸ್ಯಕರ ಘಟನೆಗಳನ್ನು ಹೇಳುತ್ತಿದ್ದರು. ಅಮೆರಿಕಾದಲ್ಲಿ ಅಧ್ಯಕ್ಷರ ಚುನಾವಣೆಯಲ್ಲಿ ಜಾನ್ ಎಫ್ ಕೆನಡಿ ಸ್ಪರ್ಧಿಸಿದಂಥ ಸಮಯದಲ್ಲಿ ಅವರು ಅಮೇರಿಕೆಯಲ್ಲಿದ್ದರು. ಇವರ ಬಳಿ ಗಾಂಧೀಜಿಯವರ ಹರಿಜನ ಪತ್ರಿಕೆಗಳ ಒಂದು ಸಂಗ್ರಹವೇ ಇತ್ತು. ಅದನ್ನು ಅವರು ನಮ್ಮ ಟ್ರಸ್ಟಿನ ಪುಸ್ತಕಾಲಯಕ್ಕೆ ಕೊಟ್ಟಿದ್ದಾರೆ. ಆ ಸಂಗ್ರಹವನ್ನು ನಾನು ಬಹಳ ಭಾವುಕತೆಯಿಂದ ಜೋಪಾನವಾಗಿ ಇಟ್ಟಿದ್ದೇನೆ. ಶ್ರೀ ನಾಗರಾಜರಾವ್ ನನಗೆ ನೆಹರೂ ಅವರ ವಿಚಾರಗಳನ್ನೊಳಗೊಂಡ ವಿಸಡಮ್ ಎಂಬ ಬಹಳ ಸುಂದರವಾದ ಪುಸ್ತಕವನ್ನು ಓದುವುದಕ್ಕೆ ಕೊಟ್ಟರು ಆ ಪುಸ್ತಕವನ್ನು ತೆರೆದಕೂಡಲೇ ನನ್ನ ಕಣ್ಣಿಗೆ ಬಿದ್ದ ಈ ಮಾತು ಬಹಳ ಪರಿಣಾಮ ಬೀರಿತು.

"ಅಜ್ಞಾನದ ಫಲ ಗಾಢಾಂಧಕಾರ" ಒಬ್ಬ ಮನುಷ್ಯನನ್ನು ಪರೀಕ್ಷಿಸುವ ನಾಲ್ಕುಮಾತುಗಳಿವೆ. ೧ ಅವನ ಸಂಭಾಷಣೆ; ೨ ಅವನ ವ್ಯಕ್ತಿತ್ವ; ೩ ಅವನ ನಡತೆ; ೪. ಅವನ ಕುಟುಂಬ ಈ ರೀತಿಯ ನೂರಾರು ಅನುಭವದ ಮಾತುಗಳು ಆ ಪುಸ್ತಕದಲ್ಲಿವೆ. ಒಂದು ದಿನ ಮೈಸೂರಿನ ಅಖಿಲಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ॥ ರತ್ನ ನನ್ನನ್ನು ನೋಡಲು ಬಂದರು. ಡಾ॥ ರತ್ನ ಒಳ್ಳೆಯ ಮಾತುಗಾರರು ಮತ್ತು ಕಲೆ ನಾಟಕ ಇತ್ಯಾದಿ ವಿಷಯಗಳಲ್ಲಿ ಬಹಳ ನುರಿತವರು. ಮೈಸೂರಿನ ನೀನಾಸಂ ಇಂದಿಗೂ ಕೂಡ ಕನ್ನಡ ನಾಟಕ ಕ್ಷೇತ್ರದಲ್ಲಿ ಹೆಸರನ್ನು ಉಳಿಸಿಕೊಂಡಿರುವಂಥ ಗೆಳೆಯರ ಬಳಗವಾಗಿದೆ, ಇವರ ತಂದೆ ಡಾ॥ ನಟೇಶ್ ಮೈಸೂರು ಆಕಾಶವಾಣಿಯ ನಿರ್ದೇಶಕರಾಗಿದ್ದರು. ಗ್ರಾಮೀಣ ಪ್ರದೇಶದಲ್ಲಿಯ ಇಂದಿನ ವೈದ್ಯಕೀಯ ಶೋಚನೀಯ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದರು. ಗ್ರಾಮಾಂತರ ಪ್ರದೇಶಗಳಿಗೆ ಯಾವ ವೈದ್ಯರೂ ಹೋಗಿ ಕೆಲಸ ಮಾಡಲು ಸಿದ್ಧರಾಗುತ್ತಿಲ್ಲ ಎಂಬ ಬಗ್ಗೆ ಹೇಳುತ್ತಾ ತಾವು ಹೇಗೆ ತಮ್ಮ ಸಂಸ್ಥೆಯಲ್ಲಿ ತಯಾರಾದ ಅಭ್ಯರ್ಥಿಗಳನ್ನು ಹಳ್ಳಿಗಳಿಗೆ ಕಳುಹಿಸಲು ವಿಫಲರಾದರೆಂಬುದನ್ನು ತಿಳಿಸಿದರು. ಹಳ್ಳಿಯ ಯುವಕರನ್ನೇ ಆಯ್ದು ಅವರಿಗೆ ಡಿಪ್ಲೋಮ ತರಬೇತಿ ಕೊಟ್ಟು ಹಳ್ಳಿಗಳಿಗೆ ಹೋಗಿ ಸೇವೆ ಮಾಡಿರಿ ಎಂದು ತಿಳಿಸಿದಾಗ ಒಬ್ಬರೂ ಸಹ ಸಿದ್ಧರಾಗಲಿಲ್ಲವೆಂಬುದನ್ನು ಸ್ವಾರಸ್ಯವಾಗಿ ತಿಳಿಸಿದರು. ಇದೇ ರೀತಿ ಒಮ್ಮೆ ನಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿ ಜಿ. ರಾಚಪ್ಪ ನನ್ನನ್ನು ನೋಡಲು ಬಂದ ಅವನ ಜೊತೆಗೆ ಅವನ ಹೆಂಡತಿ

ಚಂದ್ರಕಾಂತ ಸಹ ಬಂದಿದ್ದಳು. ಅವರಿಬ್ಬರೂ ಅಂಗವಿಕಲು ಆದರೂ ಸಹ ಉತ್ಸಾಹದಿಂದ ಸಂಸಾರ ನಿರ್ವಹಣೆ ಮಾಡುತ್ತಿದ್ದಾರೆ. ರಾಚಪ್ಪ ಟ್ರಸ್ಟಿಗೆ ವಿದ್ಯಾರ್ಥಿಯಾಗಿ ಬಂದು ಸೇರಿದ ದಿನಗಳು ಜ್ಞಾಪಕಕ್ಕೆ ಬಂದುವು ಕಾಲುಗಳಲ್ಲಿ ಅಗಾಧವಾದ ತೊಂದರೆಯಿದ್ದರೂ ಸಹ ಬಹಳ ಚಟುವಟಿಕೆಯಿಂದ ಎಲ್ಲಾ ಕೆಲಸ ಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದುದು ಮತ್ತು ಅವನ ಮದುವೆಯಾದುದು ಎಲ್ಲವೂ ಜ್ಞಾಪಕಕ್ಕೆ ಬಂತು. ಹೇಗೆ ಒಬ್ಬ ವ್ಯಕ್ತಿಗೆ ಅವಕಾಶಗಳು ದೊರೆತರೆ ಎಲ್ಲಾ ದೌರ್ಬಲ್ಯಗಳನ್ನು ಮೀರಿ ಮೇಲಕ್ಕೇರುತ್ತಾನೆ. ಎಂಬುದಕ್ಕೆ ರಾಚಪ್ಪ ಜ್ವಲಂತ ಸಾಕ್ಷಿಯಾಗಿದ್ದಾನೆ. ಅವನು ಬಹಳ ಪ್ರೀತಿಯಿಂದ ನನ್ನ ಆಸ್ಪತ್ರೆಯ ಖರ್ಚಿನ ಕಡೆಗೆ ಕಿರುವಂತಿಕೆಯನ್ನು ಕೊಡಲು ಮುಂದೆ ಬಂದಾಗ ನನ್ನ ಹೃದಯ ಕೃತಜ್ಞತಾ ಭಾವದಿಂದ ತುಂಬಿಬಂತು ಮತ್ತು ಪುನಃ ನಾನು ಜೀವನ ವನ್ನು ಎದುರಿಸಬೇಕೆಂಬ ಸ್ಥೈರ್ಯ ಮನದಲ್ಲಿ ಮೂಡಿತು. ಇನ್ನೊಂದು ಸಲ ಡಾ॥ ಬಸವರಾಜು ಬಂದರು. ಬಸವರಾಜು ಕನ್ನಡ ಸಾಹಿತಿ ಡಾ॥ ತಿಪ್ಪೇಸ್ವಾಮಿ ಅವರ ಅಳಿಯಂದಿರು ಅವರು ತಮಗೆ ಗೊತ್ತಿರುವ ರೀತಿಯಲ್ಲಿ ನನ್ನ ಕೈ ಗಳನ್ನು ಮಸಾಜ್ ಮಾಡಿದರು. ಅವರ ಈ ಸ್ನೇಹಮಯ ಸೇವೆಯು ನನ್ನ ಜೀವನದ ಅರ್ಥದ ಕ್ಷಿತಿಜವನ್ನು ವಿಸ್ತರಿಸಿತು. ಮೃತ್ಯುವಿನೊಂದಿಗೆ ನನ್ನ ಮುಖಾಮುಖಿಯ ಈ ಅನುಭವಗಳು ಸತ್ಯವಾನನ ಮರಣದ ಸಂದರ್ಭದಲ್ಲಿ ಸಾವಿತ್ರಿಯು ಎದುರಿಸಿದ ಸಾಕ್ಷಾತ್ ಮೃತ್ಯುವಿನ ರೂಪದಲ್ಲಿದ್ದ ಯಮನ ಭೇಟಿಯ ರೀತಿ ಅಲ್ಲದಿದ್ದರೂ ಸಹ ಒಬ್ಬ ವ್ಯಕ್ತಿ ಮರಣದ ತೆಕ್ಕೆಯೊಳಗೆ ಹೋಗು ವಾಗ ಅದ ಅನುಭವಗಳ ಒಂದು ಆತ್ಮೀಯ ಘಟನೆಗಳ ಸ್ಮರಣೆಯಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ಧರ್ಮಪತ್ನಿಯ ಪಾತ್ರ ಎಷ್ಟು ಹಿರಿದು ಎಷ್ಟು ಮಹ ತ್ವದ್ದು ಆಗಿರುತ್ತದೆಂಬದರ ಅರಿವು ಸಹ ಈ ಸಮಯದಲ್ಲಿ ಆಯಿತು. ಹೆಂಡತಿಯ ತಾಯಿ ರೂಪವನ್ನು ನೋಡುವ ಮತ್ತು ಅನುಭವಿಸುವ ಅವಕಾಶವನ್ನು ಈ ಸಂದರ್ಭದಲ್ಲಿ ಒದಗಿಬಂದುದು ಸ್ತ್ರೀ ಶಕ್ತಿಯ ಹಿರಿಮೆ ಗರಿಮೆಗಳ ದರ್ಶನವಾದುದು ಒಂದು ಭಾಗ್ಯವೇ ಸರಿ.

ಇದೇ ಸಮಯದಲ್ಲಿ ಪರಾಧೀನತೆಯ ಅನುಭವವು ಸಹ ತೀವ್ರವಾಗುತ್ತಾ ನಡೆಯಿತು. ಸಂಸ್ಥೆಯ ಬೆಳವಣಿಗೆಯ ಬಗ್ಗೆ ಮತ್ತು ಕಾರ್ಯಕ್ರಮಗಳ ಬಗ್ಗೆ ಕಟ್ಟಿಕೊಂಡಿದ್ದ ಕನಸಗಳು ಹೊಡೆದು ಹೋದಂಥ ಅನುಭವವು ಸಹ ಆಯಿತು ಯಾವ ಕಾರ್ಯಕ್ರಮವು ಸಹ ತನ್ನ ಮೂಲ ಉದ್ದೇಶವನ್ನು ತಲುಪದೇ ಇರುವುದಕ್ಕಾಗಿ ವಿಷಾದದ ಛಾಯೆ ಮನಸ್ಸನ್ನು ಕವಿಯಿತು. ರಾಷ್ಟ್ರ ನಿರ್ಮಾ ಣದ ಕಾರ್ಯದಲ್ಲಿ ಯುವ ಶಕ್ತಿಯ ಬಳಕೆಗೆ ಯುಕ್ತಿ ಸಾಧನವಾಗಬಹುದೆಂದು

ಪಂಪ ಪ್ರಶಸ್ತಿ ವಿಜೇತ ಪೂರ್ಣಚಂದ್ರ ತೇಜಸ್ವಿಯವರ ಚಿಂತನೆಗಳು :

ಪ್ರಶಸ್ತಿಗೆ ಪ್ರಧಾನ್ಯತೆ ನೀಡಿರುವುದು ಸಾಹಿತ್ಯಕ್ಕೆ ಒಳ್ಳೆಯದಲ್ಲ

★

ನವೋದಯ ನವ್ಯದ ನಂತರ ಬಂದ ಬಂಡಾಯ ದಲಿತ ಸಾಹಿತ್ಯಗಳು ಬಂಡಾಯ ದಲಿತ ಎಂಬ ಸಾಹಿತ್ಯದ ನೆಲೆಯಿಂದ ಹುಟ್ಟಿಕೊಂಡ ಆಂದೋಲನಗಳಲ್ಲ ಕನ್ನಡದಲ್ಲಿ ನವ್ಯ ಆದಮೇಲೆ ನಾವು ಯೋಚನೆ ಮಾಡುವಂಥ ಯಾವುದೇ ಸಾಹಿತ್ಯಮಾರ್ಗ ಕೂಡ ಬಂದಿಲ್ಲ.

★

ಜಾಗತಿಕ ವಿದ್ಯಮಾನ ಕೂಡ ಸೋವಿಯತ್ ಒಕ್ಕೂಟ ಕುಸಿದ ಮೇಲೆ ಸೈದ್ಧಾಂತಿಕ ನೆಲೆಯ ಯಾವುದೇ ಚಳುವಳಿ ಎಲ್ಲಿಯೂ ಆಗಲಿಲ್ಲ. ಇದು ಸಾಹಿತ್ಯ ಕ್ಷೇತ್ರಕ್ಕೂ ಇಳಿದು ಬಂದ ವಿದ್ಯಮಾನ.

★

ಕನ್ನಡದಲ್ಲಿ ಯಾವುದೇ ಸಾಹಿತ್ಯಮಾರ್ಗದ ಅಗತ್ಯವಿಲ್ಲದವರು ತಮಗೆ ತೋಚಿದಂತೆ ಬರೆದುಕೊಂಡು ಹೋದರು.

★

ಆಗಿನ ಮೌಲ್ಯಗಳು ಈಗ ಕಾಣದಿರುವುದಕ್ಕೆ ಏನು ಕಾರಣ? ಇದು ರಾಷ್ಟ್ರೀಯ ನೈತಿಕ ಅಧಃಪತನದ ಸಂಕೇತ.

★

೬೦-೭೦ರ ದಶಕದಲ್ಲಿ ಭ್ರಷ್ಟಾಚಾರದ ವರದಿಗಳಿಗೆ ಎಷ್ಟು ಜನ ಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಿಲ್ಲ. ಲಂಚ ತೆಗೆದುಕೊಳ್ಳುವವರು ನಾಚಿಕೆಗೇಡಿನ ವಿಷಯವೆಂಬ ಅಳುಕಾದರೂ ಆಗ ಕಾಣುತ್ತಿತ್ತು. ಈಗ ಅಧಿಕಾರದಿಂದ ಇಳಿದ ತಕ್ಷಣವೇ ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕಿದ ಪ್ರಧಾನಿಗಳಿದ್ದಾರೆ.

★

ರೈತರಿಗೆ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಯಾವತ್ತೂ ಬಂದಿರಲ್ಲ ಈಗ ಸತ್ತ ರೈತರ ಕುಟುಂಬಕ್ಕೆ ಒಂದು ಲಕ್ಷ ಕೊಡುವುದಕ್ಕಿಂತ ಸಾಯುವುದಕ್ಕಿಂತ ಮೊದಲೇ ಅಷ್ಟು ಪರಿಹಾರ ಕೊಟ್ಟಿದ್ದರೆ ಒಂದಿಷ್ಟು ರೈತರು ಉಳಿದುಕೊಳ್ಳುತ್ತಿದ್ದರು. ಜಾಗತೀಕರಣಕ್ಕೂ ಟಮೋಟೋ ಬೆಲೆ ಇಳಿಯುವುದಕ್ಕೂ ಯಾವ ಸಂಬಂಧವಿಲ್ಲ ಬಳಕೆವಸ್ತುಗಳು ಅಗ್ಗವಾಗಿ ಸಿಗುತ್ತವೆ ಎಂಬುದು ಬಿಟ್ಟರೆ ಜಾಗತೀಕರಣದಿಂದ ಏನೂ ಪ್ರಯೋಜನವಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಕೈಗಾರಿಕಾ ಕ್ಷೇತ್ರಗಳಲ್ಲಿ ಈ ಸ್ಥಿತಿ ಇದೆ. ಮಾನಸಿಕ

ಹಿಂಜರಿತ ಇರಬಹುದಾ.... ....

★

ಈಗಿನ ಸರ್ಕಾರ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಬಿಟ್ಟು ಉಳಿದೆಲ್ಲಾ ಕೆಲಸಗಳಿಗೆ ಎಲ್ಲ ಕಡೆಯಿಂದ ಸಾಲ ಪಡೆಯುತ್ತದೆ. ಈ ಸಾಲದ ಬಲೆಯಿಂದ ಜನರು ಪಾರಾಗುವುದು ಸಾಧ್ಯವೇ?

★

ಸರ್ಕಾರವನ್ನು ನಂಬಿಕೊಂಡವನು ಯಾವನೂ ಉದ್ಧಾರವಾಗಿಲ್ಲ ಈ ಸರ್ಕಾರಗಳು ಎಲ್ಲಕ್ಷೇತ್ರಗಳನ್ನು ಅಷ್ಟು ಅಷ್ಟು ಖಾಸಗೀಕರಣ ಮಾಡಿಕೊಂಡೇ ಬಂದಿವೆ. ಕರೆಂಟಬಿಲ್ ಕೊಡುತ್ತಾ ಇದ್ದರೂ ಸ್ವಂತಕ್ಕೆ ಜನರೇಟರ್ ಇಲ್ಲದೆ ಕೆಲಸವೇ ಆಗಲ್ಲ ಸರ್ಕಾರಿ ಆಸ್ಪತ್ರೆ ಇದ್ದರೂ ಬದುಕಬೇಕಾದರೆ ಖಾಸಗಿಯವರನ್ನೇ ಅವಲಂಬಿಸಬೇಕಾಗಿದೆ.

★

ಜನ ಓದುವಂಥ ಸಾಹಿತ್ಯಕ್ಕೆ ಈಗಲೂ ಓದುಗರ ಬೆಂಬಲವಿದೆ ನೀವು ಬರೆದ ಕಗ್ಗವನ್ನೆಲ್ಲಾ ಅವರು ಕೊಂಡು ಓದುತ್ತಾ ಇಲ್ಲ ಆದರೆ ಏರಿದ ಜನಸಂಖ್ಯೆಯ ಪ್ರಮಾಣಕ್ಕೆ ಓದುವರ ಸಂಖ್ಯೆ ಬೆಳೆದಿಲ್ಲ ಎಂಬುದು ನಿಜವಿರಬಹುದು. ಆದರೆ ಸಾಹಿತ್ಯವನ್ನು ಜನರಿಗೆ ತಲುಪಿಸುವ ಕೆಲಸ ಸರ್ಕಾರದಿಂದ ಆಗುತ್ತಿಲ್ಲ.

★

ಬದುಕಿಗೆ ಇರಬಹುದಾದ ಅರ್ಥವನ್ನು ತಿಳಿಯಬೇಕಾದರೆ ನಾಗರೀಕನು ಕೂಡ ಪ್ರವೃತ್ತಿಯ ನೆಲಗೆ ಇಳಿಯಬೇಕಾಗುತ್ತದೆ.

★

ಕೇವಲ ಪ್ರಾಣಿ ಭೇಟೆಗಾಗಿ ಮಾತ್ರ ಕಾಡುಇದೆಯೆಂದು ತಿಳಿದಿದ್ದ ನಿರೂಪಕನಿಗೆ ಕಾಡು ಭಾವ ವಿಶ್ವದ ನಿಗೂಢ ಅಂಶದಂತೆ ಕಾಣುತ್ತದೆ. ತೇಜಸ್ವಿ ಕಾಡನ್ನು ಎಲ್ಲಿಯೂ ವೈಭವೀಕರಿಸುವುದಿಲ್ಲ ಆದರೆ ಅದರ ಮಹತ್ವವನ್ನು ನಮ್ಮ ಅರಿವಿಗೆ ಮೂಡಿಸುತ್ತಾರೆ ಕುವೆಂಪು ತೇಜಸ್ವಿ ಅವರಲ್ಲಿ ಪ್ರಕೃತಿಯು ಸಮಾನ ಅಭಿವ್ಯಕ್ತಿಯಾದರೂ ಅದು ಭಿತ್ತರಗೊಳ್ಳುವ ಬಗ್ಗೆ ಭಿನ್ನವಾದುದ್ದು ಕುವೆಂಪು ಪ್ರಕೃತಿಯನ್ನು ಅದರ ವಿಸ್ಮಯ ಬೆರಗುಗಳೊಡನೆ ಆರಾಧಿಸುತ್ತಾರೆ ದೇವರನ್ನೂ ಕಾಣುತ್ತಾರೆ ತೇಜಸ್ವಿ ಪ್ರಕೃತಿಯನ್ನು ಅದರ ವಿಸ್ತಾರ ಆಳಗಳಲ್ಲಿ ಬೆರಗು ಕಾಣುತ್ತಾರೆ. ಆರಾಧಿಸುವುದಿಲ್ಲ ಅದನ್ನೂ ವಾಸ್ತವಿಕ ಅನುಭವದ ಸತ್ಯವನ್ನಾಗಿ ಸ್ವೀಕರಿಸಿ ಶೋಧಿಸಿ ಹೊರಡುತ್ತಾರೆ.

-- 'ಸುಧಾ' ಸಾಭಾರ

೩೦ ನೇ ಪುಟದಿಂದ

ಭಾವಿಸಲಾಗಿದ್ದ ಕಾಲೇಜು ಆ ರೀತಿ ರೂಪಗೊಳ್ಳದೇ ಇದ್ದುದು ಅದೇ ರೀತಿ ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಬಲ್ಲದೆಂದು ನಿರೀಕ್ಷಿಸಲಾಗಿದ್ದ ಖಾದಿ ಕಾರ್ಯಕ್ರಮವು ಬೆಳೆಯದೆ ಇದ್ದುದು ಶೈಕ್ಷಣಿಕ ಕಾರ್ಯಕ್ರಮಕ್ಕೆ ಒಂದು ಸರಿಯಾದ ದಿಸೆ ಮತ್ತು ನೆಲೆ ದೊರೆಯದೆ ಇದ್ದುದು ಆಘಾತಕಾರಿ ಸಂಗತಿಯೆನಿಸಿತು. ಇಂಥ ಪರಿಸ್ಥಿತಿಗೆ ಯಾರು ಕಾರಣ ಎಂದು ಗುರ್ತಿಸುವುದು ಸಹ ಕಠಿಣವಾದ ಸಂಗತಿಯೆನಿಸಿತು. ಇಂದಿನ ಸಾಮಾಜಿಕ ವ್ಯವಸ್ಥೆಯು ಬಹಳಷ್ಟು ಅಪರಾಧಿ ಸ್ಥಾನದಲ್ಲಿ ನಿಲ್ಲಬಹುದೇನು ಏಕೆಂದರೆ ಯಾವುದೇ ಹೊಸ ಬದಲಾವಣೆಯನ್ನು ಹೊಸ ವಿಚಾರವನ್ನು ಒಪ್ಪದೇ ಇರುವಂಥ ಮನೋಭಾವ ಸಾಮಾಜಿಕ ವ್ಯವಸ್ಥೆ ಹೊಂದಿರುತ್ತದೆ. ಆದರ್ಶ ಅಥವಾ ಸಿದ್ಧಾಂತದ ಆಧಾರದ ಮೇಲೆ ಕೆಲಸ ಮಾಡುವುದು ಪ್ರವಾಹದ ವಿರುದ್ಧದ ಈಜಿನಂತೆಯೇ ಆಗಿರುತ್ತದೆ. ಆದರೂ ಸಹ ಮಾನವ ಕುಲದ ರಚನೆ ಆದಾಗಿನಿಂದಲೂ ಆದರ್ಶದ ಬೆನ್ನು ಹಿಡಿದು ಹೋಗುವ ಮನುಷ್ಯನ ಸ್ವಭಾವದಲ್ಲಿ ಸ್ವಲ್ಪವೂ ಬದಲಾವಣೆಯಾಗಿಲ್ಲ. ಬದಲಾವಣೆ ಆಗಲೂ ಕೂಡದು ಈ ಮನೋಭಾವ ಇಲ್ಲದೆ ಹೋದಲ್ಲಿ ಸಾಹಿತ್ಯ ಸಾಂಸ್ಕೃತಿ ಸಂಗೀತ ಕಲೆ ನಾಗರೀಕತೆ ಮುಂತಾದ ಪ್ರತಿಬೇಗಳಿಗೆ ಅರ್ಥವೇ ಇರುವುದಿಲ್ಲ ಈ ಎಲ್ಲ ವಿಚಾರಗಳು ಮನಸ್ಸಿನಲ್ಲಿ ಮೂಡುತ್ತಿದ್ದಾಗ ಸಹಜವಾಗಿಯೇ ಜಯಪ್ರಕಾಶ್ ನಾರಾಯಣ್ ಅವರ ಸೆರೆಮನೆಯ ದಿನಚರಿಯಲ್ಲಿ ಅವರು ಬರೆದ ಈ ಮಾತುಗಳು ಗಳು ಜ್ಞಾಪಕಕ್ಕೆ ಬಂದವು. ಅವರು ಜೈಲಿನಲ್ಲಿ ದಿನಚರಿಯನ್ನು ಬರೆಯಲು ಪ್ರಾರಂಭಿಸಿದ ಮೊದಲ ದಿನದ ಬರಹದ ಮೊದಲನೆಯ ವಾಕ್ಯ ಈ ರೀತಿ ಇದೆ:- "ನನ್ನ ಪ್ರಪಂಚ ನುಚ್ಚು ನೂರಾಗಿ ಸುತ್ತಲೂ ಬಿದ್ದಿದೆ. ಮತ್ತೆ ನನ್ನ ಜೀವ ಮಾನದಲ್ಲಿ ಅದು ಕೂಡಿಕೊಳ್ಳುವುದನ್ನು ನೋಡಲಾರೆ ಎಂಬ ಭಯ ನನಗಿದೆ. ನನ್ನ ಕಿರಿಯ ಬಂಧುಗಳು ಬಹುಶಃ ಅದನ್ನು ಕಂಡಾರೋ ಎಂದೂ ಹೇಳಲಾರೆ" ಜಯಪ್ರಕಾಶರ ಈ ಮಾತುಗಳು ಪ್ರತಿಯೊಬ್ಬ ಸಾಧಕನಿಗೂ ಅನ್ವಯಿಸುತ್ತವೆ ಎಂದು ಅನಿಸುತ್ತದೆ. ಅಂಥ ಎಲ್ಲಾ ಬಂಧುಗಳ ಶುಭ ಹಾರೈಕೆ ಮತ್ತು ಕೋರಿಕೆಗಳ ಕಾರಣದಿಂದ ನಾನು ಪುನಃ ಧರೆಯ ಮೇಲೆ ಆರೋಗ್ಯವಂಥನಾಗಿ ಓಡಾಡಲು ಸಾಧ್ಯವಾಗುವಂತೆ ನೆರವಾದ ಎಲ್ಲಾ ಹಿರಿ-ಕಿರಿಯ ಬಂಧುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ★

KA-SKMND-470/-2000. ತೆರೆದ -ಅಂಚೆ

Regd No. KAR/KAN/2000/3820

Vol 2 Issue 6.

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press. Melkote on behalf of Janapada Seva Trust, (Regd) Melkote. Dist – Mandya 571 431.

Phone : 08236/48754